(iii) communication facilities;

(iv) sizeable population, *i.e.*, round about 1,500;

(v) economic viability, *i.e.*, the total annual income should be round about Rs. 2,000 so that the Panchayats are able to carry on at least their obligatory duties;

(vi) the distance between the Panchayat headquarters and the constituent villages. It should not be more than 5 miles;

(vii) other considerations which enable the smooth running of the Administration of the Panchayats;

(viii) due consideration should be given to opinions of all sections of the public to avoid as far as possible complaints, objections, etc.

Before finalising the re-grouping, the Divisional Commissioners will publish the preliminary notification indicating the proposed re-grouping of the existing Panchayats. Persons affected by the re-grouping may send their suggestions or objections to him in this regard, within the time prescribed by him. The Divisional Commissioners will finalise the regrouping after taking into consideration all the representations received in this regard.

The Villagers of Benthur and Anthur may therefore approach the Divisional Commissioner, Belgaum in the matter.

CONSIDERATION OF THE REPORT OF THE COMMISSION ON THE MAHARASHTRA-MYSORE-KERALA BORDER DISPUTES

(Debeate Contd.)

SRI L. SRIKANTIAH (Nanjangud).—Sir, the Leader of the House was pleased to remark long before this Report was discussed in this House that the Government is prepared to accept the Mahajan Commission Report. Now in today's paper, instead of Sri Y. B. Chavan, Union Home Minister, Sri V. C. Shukla, Union Minister of State for Home Affairs, says that the Government's decision on the Mahajan Commission's Report on the Mysore-Maharashtra-Kerala border disputes would be based on a "national consensus" to be evolved and the report was not like an award of an arbitrator. Shall I take it that Sri Shukla has stated this with the prior consent of the Mysore Government? Since the Mysore Government has been totally let down, will the Leader of the House, the Hon'ble Chief Minister resign and submit the resignation to the House to-day only?

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಯಾವ ಸದಸ್ಯರೇ ಆಗಲ ಪೇಪರ್ ತಂದು ಸಭೆಯಲ್ಲಿ ಓದಬಾರದು, ಅದರಲ್ಲಿರುವುದನ್ನು ಬೇಕಾದರೆ ಸಭೆಯಲ್ಲಿ ಹೇಳಬಹುದು. ಪೇಪರ್ ತಂದು ಇಲ್ಲಿ ಓದುವುದಕ್ಕೆ ರೂಲ್ಸ್ ಅಡ್ಡಿಬರುತ್ತವೆ.

Mr. SPEAKER.—A Point of Order was raised on the ground that Sri L. Srinkantiah has gone beyond the rules by reading a Paper. I don't think, Sri Srikantiah read any Paper. He had a Paper; he said that some statement has been made by somebody in Delhi and therefore somebody should resign. As to who should resign has already been mentioned by him and recorded. For this purpose, I don't think the Debate is to be pushed aside and some other matter should be taken in this incidental manner. Therefore, I don't think there is any Point of Order in it, nor can Sri Srikantiah call upon me to push aside the business on hand and see that a resignation should be called for now only.

Sri L. SRIKANTAIAH.—The Central Government has taken a decision behind the back of the Mysore Government, which amounts to inditement of the Mysore Government, because it will have no value to the statement made by the Chief Minister of Mysore.

Mr. SPEAKER.—That is a part of the Debate. If it is a Point of Order, I will deal with it. If it is a point to be discussed in the course of the debate, it can be discussed during the course of the debate. If it is a reflection on Government, there are ways of bringing it before the House. If there is any motion that is to be made to brush aside the discussion, let that be done. If members simply raise a point, I do not understand how I am to deal with it. It is not a Point of Order. Let it be taken by somebody in some form, as a motion before the House......

Sri H. SIDDAVEERAPPA (Harihar).—Sir, I want only a clarification from the Hon'ble the Leader of the House. As far as we can see, the statement that he made yesterday, as has been expressed so clearly, both I think, in this House and definitely outside, that this Mahajan Commission Report shall have to be taken as an award and shall have to be implemented in toto as an award. But, the statement made yesterday in Parliament by the Hon'ble Minister of State for Home Affairs, Sri Shukla, is to the effect that it cannot be construed as an award. What is called the concept is to be canvassed and it is like any other report and we cannot take it as an award. This is what he says, and my friend, Sri Srikantiah wanted to know whether that statement made in the Parliament has the concurrence or the approval or the knowledge of the State Government.

The statement is at variance from the statement of the Leader of the House. The Leader of the House can clarify the position so that our discussion in the House should not go on at randum. So the position should be made clear by the Leader of the House and let us know where we stand.

Sri L. SRIKANTIAH.—Mr. Sukhla, State Minister for Home, has made a statement on this subject. The statement has appeared in the Press. If the Government of India is of the opinion that consensus of opinion should be taken from the Leaders of the Opposition Parties and other leaders, there is no meaning in discussing the subject here and

even if we do so it will go a waste. Our leaders are not in a position to do anything in Centre. The Central Government is thinking of conducting a plebicite. If that is so, what is good in discussing here. There is no effective leadership here. Therefore, the Chief Minister should resign.

MR. SPEAKER.—The question whether resignation should be given or should not be given is outside the scope of the present debate and is altogether a different matter. A statement might have appeared elsewhere and it is beyond the scope of House. If the House does not want to discuss the subject before the House let the House say it does not want and then we will consider it. I have nothing to say in the matter. The Speaker can preside over the deliberations and he cannot compel anybody to make any statement. If it is a point of order, I can hear. If I shut out what is going to be said, I feel I am doing something wrong. But there is no reasoning in saying that discussion should be postponed or stopped. If the Hon'ble Chief Minister wants to say something on this he may do so.

SRI S. NIJALINGAPPA (Chief Minister).—Hon'ble Member Sri Srikantiah expressed some doubts and wanted clarification. If the wants some clarifications, there is ome meaning in it. But there is no meaning in his saying that the Government should resign and I take no notice of it. The facts remains that the report of the Commission is by a person of the highest judicial standing, and it must be treated as an award. This is what I have said. It must be treated as an award by the Central Government. The Central Government will have to do this after hearing our views through this House. Professor Srikantiah has brought some newspapers and he said that the Central Government is having different opinion regarding this matter. I have no idea of it unless I get an authorised version in this behalf. According to one paper, the Home Minister has made a statement *i.e.*, he is going to refer this to the Leaders of the Opposition parties. According to another paper, the India Government is trying to get consensus of opinion in the matter, from the Leaders of all the parties. Nobody need think that it is the decision of the Central Government. The Government of India cannot decide like this. According to the version of the newspapers it is not a decision at all. Opinions are expressed and we cannot act according to the opinions. I shall get authorised version. If it is the opinion expressed by the Central Ministers, we do not agree with it. That is what I have got to say.

SRI S. SIVAPPA (Sravanabelgola).—The Chief Minister has clarified the position saying that the statement made by the Hon'ble Home Minister Mr. Chavan an also by the Home Minister for State Mr. Shukla will be shelved almost. We take it for granted that it is reported in all the newspapers. The newspapers cannot quote wrong things. It is the real fact. I request the Hon'ble Speaker not to take up this question. If they say they are going to take national consensus, that means, they want to go back and if it is so what will be the fate of the Report of teh

(SRI S. SIVAPPA)

Commission. The report of the Commission was submitted to the Home Minister but not to you and me. It is the Home Minister that has to accept that report. He says it is only after taking the national consensus. When that is the position, what purpose will be served in discussing this report here? What purpose will be served in expressing our opinion here on this report? The Chief Minister should take a firm stand and not allow such things to happen *i.e.*, taking national consensus. It is for the House to consider.

Mr. SPEAKER.—A request has been made by the Leader of the Opposition to the Chief Minister and the Members of the House with regard to the action to be taken in the matter. Now Sri Shettar will speak.

[MR. DEPUTY SPEAKER in the Chair]

† ಶ್ರೀ ಎಸ್. ಎಸ್. ಸೆಟ್ಟರ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ ಈ ಮಹಾಜನ್ ಕಮಿಷನ್ ವರದಿಯಮೇಲೆ ನನ್ನ ಚರ್ಚೆಯನ್ನು ನಾನು ಪ್ರಾರಂಭಮಾಡುವ ಮುನ್ನ ನಮ್ಮ ರಾಜ್ಯದಲ್ಲಿರತಕ್ಕ ಮರಾಠೀ ಭಾಷೆಯನ್ನಾಡತಕ್ಕ ಜನರೇನಿದ್ದಾರೆ. ಅವರು ನಮ್ಮ ಕನ್ನಡ ರಾಜ್ಯದಮೇಲೆ ಅಭಿಮಾನ ಇಟ್ಟು ಹಾಗೂ ಪ್ರೇಮವನ್ನಿಟ್ಟು ಅವರು ನಮ್ಮ ಕನ್ನಡ ರಾಜ್ಯದಲ್ಲೇ ಉಳಿಯುವುದಾಗಿ ಮಹಾಜನ್ ಕಮಿಷನ್ ಮುಂದೆ ತಮ್ಮ ಸಾಕ್ಷ್ಯವನ್ನು ಕೊಟ್ಟ ಆ ಮಹನೀಯರನ್ನೆಲ್ಲಾ ನಾನು ಮೊದಲು ಅಭಿನಂದಿಸಿ ಅದೇ ರೀತಿ ಕೇರಳ ಭಾಷೆಯನ್ನಾಡತಕ್ಕ ಜನರೂ ಸಹಾ ನಮ್ಮ ಕನ್ನಡ ರಾಜ್ಯದಲ್ಲೇ ಉಳಿಯುವುದಾಗಿ ಸಾಕ್ಷ್ಯವನ್ನಿತ್ತ ಮಹನೀಯರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನಾನು ನನ್ನ ಭಾಷಣವನ್ನು ಪ್ರಾರಂಭಮಾಡುತ್ತೇನೆ.

(*repeated in Marathi*)

ಮಹಾಜನ್ ವರದಿಯ ಪುಟ 25 ರಲ್ಲಿ ಒಂದು ಬಹಳ ಖೇದದಾಯಕವಾದ ರಿಮಾರ್ಕ್ಸ್‌ನ್ನು ಆ ಮಹಾಜನ್‌ರವರು ಹೇಳಿದ್ದಾರೆ. ಅದು ಹೀಗಿದೆ :—

"......Consistency however is a virtue that cannot be insisted in matters political ...."

ಈ ಮಾತುಗಳನ್ನು ಹೇಳುವಾಗ ಅವರು ಬಹಳ ನೊಂದುಕೊಂಡು ಹೇಳಿದ್ದಾರೆಂದು ಕಂಡುಬರುತ್ತದೆ. ಆ ಕನ್‌ಸಿಸ್ಟೆನ್ಸಿ ಎಂಬ ಒಂದು ನಿಲುವೆಯನ್ನು ಅಥವಾ ಅಂಥಾ ಒಂದು ಸದ್ಭಾವನೆಗೆ ಅಂಟಿ ಕೊಂಡಿರತಕ್ಕ ಜನರು ರಾಜಕೀಯಲ್ಲಿದ್ದಾಗ ಕೊನೆಯವರೆಗೂ ಅವರು ಆ ಸದ್ಭಾವನೆಗೆ ಅಂಟಿ ಕೊಂಡಿರುವರೇ ಎಂಬ ಒಂದು ಅನುಮಾನವನ್ನುಂಟುಮಾಡತಕ್ಕ ಸನ್ನಿವೇಶ ಮಹಾಜನ್‌ರಲ್ಲಿ ಉಂಟಾಗಿದೆ. ಆದರೆ ಅವರಲ್ಲಿ ಅಂಥಾ ಒಂದು ಅನುಮಾನವನ್ನುಂಟುಮಾಡತಕ್ಕ ವಾತಾವಣವೇನು ಇತ್ತು ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ನಾವು ನಮ್ಮ ಹಾಗೂ ಮಹಾರಾಷ್ಟ್ರೀಯ ರಾಜಕೀಯಗಳೆರಡರ ಸನ್ನಿವೇಶವನ್ನೂ ಗಮನಿಸಿದಲ್ಲಿ ಯಾರ ಯಾರ ನಿಲುವೆ ಯಾವಾಗ ಬದಲಾವಣೆಯಾಗುತ್ತದೆ, ಎಲ್ಲಿ ವಾತಾವರಣ ಯಾವಾಗ ಹೇಗೆ ಬದಲಾಗುತ್ತದೆ ಎಂಬುದನ್ನು ನಿರ್ಧರಿಸುವುದು ಬಹಳ ಕಷ್ಟ. ಯಾರು ಮೊದಲು ಮಹಾಜನ್ ಕಮಿಷನ್ನಿನ ನೇಮಕಕ್ಕೆ ವಿರೋಧಿಸಿದ್ದವರು ಮುಂದೆ ಅದರ ವರದಿಯನ್ನು ಅಂಗೀಕರಿಸುವರೋ ಅಥವಾ ವಿರೋಧಿಸುವರೋ ಎಂಬುದನ್ನಾಗಲೀ ಇಲ್ಲವೇ ಯಾರು ಮೊದಲು ಮಹಾಜನ್ ಕಮಿಷನ್ನಿನ ನೇಮಕಕ್ಕೆ ಬೆಂಬಲ ನೀಡಿದ್ದರೋ ಅಂಥವರು ಮುಂದೆ ಅದರ ವರದಿಯ ಬಗ್ಗೆ ಬೆಂಬಲ ನೀಡುವರೋ ಅಥವಾ ಅದನ್ನು ತಿರಸ್ಕಾರಮಾಡುವರೋ ಎಂಬುದನ್ನು ಆ ಕಮಿಷನ್ ನೇಮಕವಾಗಿದ್ದ ಕಾಲದಲ್ಲಿ ಹೇಳಲು ಬಹಳ ಕಷ್ಟವಾಗಿತ್ತು. ಆದರೆ ಈ ದಿನಸ ಮಾನ್ಯ ಶುಕ್ಲಾರವರು ಕೊಟ್ಟಿರತಕ್ಕ ಆ ಒಂದು ಹೇಳಿಕೆ ಏನಿದೆ ಅದರಲ್ಲಿಯೂ ಸ್ವಲ್ಪ ಸತ್ಯಾಂಶವಿದೆ. ಈ ವಿಷಯವನ್ನು ಚರ್ಚೆಮಾಡಿ

ಒಂದು ನಿಲುವನ್ನು ಒಪ್ಪಿಕೊಂಡಮೇಲೆ ಮುಂದೆ ಆ ನಿಲುವಿನ ಬಗ್ಗೆ ತಿರಸ್ಕಾರ ಭಾವನೆಯನ್ನು ತಾಳಿದರೆ ಮುಂದೆ ನಾವೇನು ಮಾಡಬೇಕು ಅನ್ನುವ ಆ ನಿರ್ಧಾರವೇನಿದೆ ಅದು ಬಹಳ ವಿಚಿತ್ರ ವಾದುದ್ದಾಗಿದೆ.

ಈ ಹಿಂದೆ ಮಾತನಾಡಿದ ನಮ್ಮ ಹಿರಿಯ ಕಾಂಗ್ರೆಸ್ ಸ್ನೇಹಿತರು ಹೇಳಿದಂತೆ ಇದು ಯಾವ ಒಂದು ಪಕ್ಷದ ಪ್ರಶ್ನೆಯಾಗದೆ ಇದೊಂದು ನಿಷ್ಪಕ್ಷಪಾತ ಪ್ರಶ್ನೆಯಾಗಿ ಚರ್ಚೆಯಾಗಿ ಇದು ಚರ್ಚೆ ಯಾಗಬೇಕಾಗಿತ್ತು. ಮಹಾಜನ್‌ರವರು ಅವರ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಆ ಮಹಾಜನ್ ಸಮಿತಿಯನ್ನು ನೇಮಕ ಮಾಡುವ ಮುನ್ನ ದೇಶದಲ್ಲಿ ಏನೊಂದು ಪರಿಸ್ಥಿತಿ ಉದ್ಭವವಾಗಿತ್ತು ಅನ್ನುವುದರ ಬಗ್ಗೆ ಅವರು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ; ಹಾಗೂ ಸವಿಸ್ತಾರವಾಗಿ ಚರ್ಚೆಮಾಡಿದ್ದಾರೆ ಅದನ್ನು. ಇದು ಕಡೆಗೆ ಏನು ಒಂದು ಪಕ್ಷದ ಪ್ರಶ್ನೆ ಯಾಗಿ ಉಳಿಯುತ್ತದೋ, ಅಥವಾ ಇದು ಒಂದು ದೇಶದ ಪ್ರಶ್ನೆಯಾಗಿ ಉಳಿಯುತ್ತದೋ ಅನ್ನುವುದನ್ನು ನೋಡಬೇಕು ಎಂಬುದಾಗಿ ಅವರು ವರದಿಯ ಪುಟ 19ರಲ್ಲಿ ಹೀಗೆ ಹೇಳಿದ್ದಾರೆ.—

> "It was made clear that it would be difficult for the Maharashtra Cabinet to function if there was any further delay in the setting up of this Commission. The matter reached a High pitch when Shri Naik was reported to have been authorised by his Cabinet colleagues to take a tough line in the Working Committee meeting and offer the resignation of the Cabinet, if necessary."

ಇಂಥಾ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಕಾಲದಲ್ಲಿ ಅವರು ಯಾವ ನಿಲುಮೆತಾಳಿದ್ದ ರೆಂಬುದನ್ನು ನೋಡಬೇಕಾಗಿದೆ.

> "A High Power Delegation of Congressmen from Maharashtra and Bombay led by the President of Maharashtra Pradesh Congress Committee met the Prime Minister and the Congress President and the Home Minister and urged upon them that a Commission should be appointed without delay and its terms of reference should be settled by the Working Committee. Otherwise the Opposition parties in Maharashtra would exploit the situation to dislodge the Congress."

ಅವರ ಒಳಗಿನ ಉದ್ದೇಶ ಸ್ಪಷ್ಟವಾಗಿದೆ. ಇಂಥ ಒಂದು ಹಿನ್ನೆಲೆ ಅದಕ್ಕಿತ್ತು ಎಂಬುದನ್ನು ಮರೆಯಬಾರದು ಎಂಬ ವಿಚಾರವನ್ನೂ ಕೂಡ ಅವರು ಹೇಳಿದ್ದಾರೆ. ಆದರೆ ಇದರಲ್ಲಿ ಕಾಂಗ್ರೆಸ್ಸಿ ನವರ ಒಂದು ಪ್ರಶ್ನೆ ಇದೆಯೇ, ಅಥವಾ ಇದರಲ್ಲಿ ಒಂದು ದೇಶದ ಪ್ರಶ್ನೆ ಇದೆಯೇ, ಅಥವಾ ಇದರಲ್ಲಿ ಒಂದು ಭಾಗದ ಜನರ ಪ್ರಶ್ನೆ ಇದೆಯೇ ಅಥವಾ ಇದರಲ್ಲಿ ಕೇವಲ ಕನ್ನಡಭಾಷೆಯ ಜನತೆ ಪ್ರಶ್ನೆ ಇದೆಯೇ ಅಥವಾ ಇದರಲ್ಲಿ ಕೇವಲ ಮರಾಠೀ ಮಾತನಾಡತಕ್ಕ ಜನರ ಪ್ರಶ್ನೆ ಇದೆಯೇ ಎನ್ನತಕ್ಕ ಅಂಶಗಳನ್ನೆಲ್ಲಾ ಆ ಮಹಾಜನ್ ಅವರು ಪ್ರಸ್ತಾಪಿಸಿದ್ದಾರೆ. ಈ ಬಗ್ಗೆ ಅವರು ತಮ್ಮ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ.—

> "The cry of the day is national integration."

ಈ ಮಾತುಗಳನ್ನು ನಾವು ಎಂದೂ ಮರೆಯಲಿಕ್ಕಾಗದು. ಎರಡು ರಾಜ್ಯಗಳು ಸೇರಿ ಒಂದು ಬೇಡಿಕೆಯನ್ನಿಟ್ಟಿರುವಾಗ ಈ ಎರಡೂ ರಾಜ್ಯಗಳಲ್ಲಿರತಕ್ಕ ಜನರಲ್ಲಿ ಭಿನ್ನಭಿನ್ನವಾದ ಭಾವನೆಗಳು ಬೆಳೆದಾಗ ದೇಶದಲ್ಲಿ ಒಂದು ಏಕಭಾವನೆ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆ ಆ ಉಭಯತ್ರರಲ್ಲೂ ಒಂದು ಭಿನ್ನಭಾವನೆ ಉಂಟಾದರೆ ಅವರು ಮಹಾರಾಷ್ಟ್ರೀಯರಾಗಿರಲಿ ಇಲ್ಲವೇ ಕನ್ನಡಿಗರೇ ಆಗಿರಲಿ ಆ ರಾಜ್ಯಭಾಷೆಯಲ್ಲದ ಭಿನ್ನ ಭಾಷೆಯ ಜನರಿಗೆ ಅಂಥ ಭಿನ್ನಭಾವನೆ ಗಳಿಂದ ಬಹಳ ತೊಂದರೆಗಳಾಗುತ್ತವೆಂದು ಹೇಳಿದ್ದಾರೆ. ಅವರ ವರದಿಯಲ್ಲಿ ಹೇಳಿರತಕ್ಕ ಅನೇಕ ಅಂಶಗಳನ್ನು ಅವಲೋಕನ ಮಾಡಿದರೆ ಇದು ಗೊತ್ತಾಗುತ್ತದೆ.

(ಶ್ರೀ ಎಸ್. ಎಸ್. ಶೆಟ್ಟರ್)

ಆ ಮಹಾಜನ್‌ರವರು ಇನ್ನೂ ಒಂದು ಮಾತನ್ನು ಹೇಳಿದ್ದಾರೆ. ಅವರು ನಮ್ಮ ಮೈಸೂರು ರಾಜ್ಯದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ—ಯಾವ ಮರಾಠೀ ಮಾತನಾಡತಕ್ಕ ಜನರು ಒಂದು ಅಭಿಮಾನದಿಂದ ತಾವು ಕನ್ನಡ ರಾಜ್ಯದಲ್ಲೇ ಉಳಿಯುತ್ತೇನೆಂದು ಹೇಳಿದ್ದಾರೋ ಅವರು ಆ ಮಾತುಗಳನ್ನು ಒಂದು ಒತ್ತಾಯದಮೇಲೆ ಹಾಗೆ ಹೇಳಿರತಕ್ಕ ಮಾತಾಗಿದೆ ಎಂದು ಹೇಳಿದ್ದಾರೆ. ಆದರೆ ಈ ಮಾತನ್ನು ನಾವು ಒಪ್ಪಬಹುದೇ ಅಥವಾ ಒಪ್ಪಬಾರದೇ ಅನ್ನತಕ್ಕ ವಿಚಾರದಲ್ಲಿ ಹಿಂದೆ ಮಾತನಾಡಿದ ಸದಸ್ಯರು ಯಾವುದನ್ನೂ ಹೇಳಲಿಲ್ಲ. ಅವರು ತಮ್ಮ ವರದಿಯ ಪುಟ 49ರಲ್ಲಿ ಹೀಗೆ ಹೇಳಿದ್ದಾರೆ.—

> "I was somewhat surprised when Panchayats and people of some of the Marathi majority villages in Nipani Bhag and some Maratha bodies expresed a desire against any change from Mysore to Maharashtra. It, however, seems to me that this rather unusual circumstance was due to pressures of one kind or other on them. In order to negative the strong Maratha complexion of these villages, these persons seem to have been canvassed to express wishes against any change and to show that even Marathi majority village people did not wish to opt for Maharashtra. In my opinion the value of such canvassed opinion in Marathi villages is not such a compelling circumstance so as to rebut the linguistic homogeneity principle"

ಆದುದರಿಂದ ನಾನು ಹೇಳುವುದು ಈ ಮಹಾಜನ್ ವರದಿಯನ್ನು ಎಂದಿಗೂ ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಕಾರಣವೇನು ಎನ್ನುವುದು ಇದರಲ್ಲೇ ಇದೆ.

10-00 A.M.

Sri S. D. KOTHAWALE.—He is giving judicial opinion. We cannot attribute anything to him.

Sri S. S. SHETTAR.—I am not attributing any motives. I am dealing with the point as to how far we can accept this report. ಮಹಾಜನ್ ರಿಪೋರ್ಟ್‌ನಲ್ಲಿ ಯಾವ ತತ್ವವನ್ನು ಅನುಸರಿಸಿ ಹೇಳಿದ್ದಾರೆ ಎನ್ನುವುದನ್ನು ಇಲ್ಲಿ ಸ್ವಲ್ಪ ಹೇಳಲು ಪ್ರಯತ್ನ ಮಾಡುತ್ತೇನೆ. ಇದರಲ್ಲಿ ಬಿಜಾಪುರವೇ ಇರಲಿ, ಬೆಳಗಾಂ ಇರಲಿ, ಯಾವುದಾದರೂ ಇರಲಿ. 1956ನೇ ಇಸವಿಯಲ್ಲಿ ಸ್ಟೇಟ್ ರೀ ಆರ್ಗನೈಸೇಷನ್ ಆಕ್ಟ್ ಪಾಸಾದ ಮೇಲೆ ಯಾವ ರೀತಿಯಾದ ತೀರ್ಪು ಕೊಟ್ಟರೋ ಅದನ್ನು ಪಾರ್ಲಿಮೆಂಟು ಒಪ್ಪಿಕೊಟ್ಟಿದೆ. ಆ ಒಪ್ಪಿಗೆಯಾದನಂತರ ಕರ್ಣಾಟಕ ಯೂನಿವರ್ಸಿಟಿ ಆಕ್ಟ್ ಹಾಗೂ ಇನ್ನಿತರ ಆಕ್ಟ್‌ಗಳೂ ಆಯಾ ಸನ್ನಿವೇಶಗಳಿಗನುಗುಣವಾಗಿ ಆಗಿವೆ. ಪುನಃ ಈಗ ಇಂತಹ ಭಾಗಗಳು ಬರಲಿಲ್ಲ ಎಂದು ಈ ಪ್ರಸಂಗವನ್ನು ಎತ್ತುವುದು ಅಷ್ಟು ಸರಿಯಲ್ಲ ಮತ್ತು ಕೆಲವು ಭಾಗಗಳನ್ನು ಹೆಚ್ಚು ಕಡಿಮೆ ಮಾಡಬೇಕೆಂದು ಮಾಡುವ ಆವಶ್ಯಕತೆಯೂ ಇಲ್ಲ ಮತ್ತು ಇಂತಹ ಆವಶ್ಯಕತೆ ಇದೆ ಎಂದೂ ಎಲ್ಲಿಯೂ ಹೇಳಲಿಲ್ಲ. ಬೆಳಗಾಂ ಜಿಲ್ಲೆಯಮಟ್ಟಿಗೆ ಇಲ್ಲಿ ಹೇಳಬೇಕಾಗಿದೆ. ಎಸ್. ಆರ್. ಕಮಿಷನ್ ಏನು ಹೇಳಿದೆ ಅದನ್ನು ಇಲ್ಲಿ ಸ್ವಲ್ಪ ಓದಿ ಹೇಳುತ್ತೇನೆ.

I am saying that the decision of the States Reorganisation Commission must be proved to be not correct. The only the re-opening of this particular issue will arise. On page 138 we can see that he was so particular in maintaining the agreement with Hyderabad. It is a question as to how an issue which has been decided by Parliament, which has been once accepted can be re-opened and which can be

reagitated. That was the stand of Mysore. Whether this stand is given up today, this is an important issue which will have to be discussed.

Sir, after the re-organisation of the States the four districts which I have referred to were given to Karnataka. And then it will have to be seen whether there remain any other karnatak areas in Maharashtra or Bombay State which was formed then. The question of Akkalkot and Jath, South Sholapur and Ghadinglaj—if all these things are gone into it will be very clear that the Mysore Government did not take proper care in making demands. On the contrary it is the Maharashtra which came forward to offer 260 villages, why the Government of Mysore were negligent in making any claim for these villages. I say Sir, if at all any Government had any right to make any claim for territories, it is only the Mysore Government which had a right because the boundaries were settled and the question of Belgaum district was practically settled by the Parliament. If any minor adjustments were to be made, the question of Akkalkot was never raised.

Mr. DEPUTY SPEAKER.—I am taking the opinion of the House whether we should adjourn for half an hour.

Sri D. M. SIDDAIYA (Biligere).—We can continue the debate without interruption today, Sir, for want of time.

Mr. DEPUTY SPEAKER.—Then the member will continue.

Sri S. S. SHETTAR.—The question of Ghadinglaj was never raised by the Mysore Government. I say that the linguistic battle of Mysore Government in respect of the several areas was fought by the Maharashtra Government. Old Mysore Government did not make any claim. It is Maharashtra which ventured to place its claim and came forward to give certain villages. No doubt, if the balance of convenience is looked into, it is the Mysore Government which has got a priority and the Mysore Government can claim its own territory beyond Belgaum, Bijapur districts in Maharashtra. Maharashtra cannot claim any areas, because the Parliament has already settled the question, the question of *res judicata*, the question of estoppal, the question of final position, the Government had to say why the S. R. C. decision in this respect was wrong.

Another mistake is, Kasargod issue is linked with this particular issue ; how it is embarassing and how it is complicating our case has to be seen. Kasargod issue came forward for the first time when our Chief Minister was compelled by the Maharashtra Government to agree for the appointment of the one-man Commission. He said that he never liked the one-man commission and it was forced upon him.

Sri S. NIJALINGAPPA.—Let me make myself clear. The people of Kasargod have been agitating all along; just as, the people of Maharashtra are agitating and they have been demanding it all the time.

Sri S. S. SHETTAR.—I have to make my statement very clear. The Hon'ble Chief Minister has said that Kasargod people agitated. Kasargod may be agitating. What about the claim of the Mysore Government ? I must congratulate the Maharashtra Government. Has Mr. Hegde placed the case of Kasargod before the Government of India and did he say that the people of Kasargod are agitating that they want to join Mysore ? Has the Government of Mysore taken care to place their demand before the Government of India ?

Sri RAMAKRISHNA HEGDE (Minister for Finance and Planning).—May I say, If I placed the views in regard to the border question before the Union Government, it was not in my individual capacity. It was as a representative of the Mysore Government ; and whatever views I placed before the Union Government, it was the views of the Government of Mysore.

Sri S. S. SHETTAR.—I ask whether this has been submitted to the Zonal Council. Just as Maharashtra has made its claim, if anybody wants to make any claim, they have to place their claim that this area belongs to Mysore and separate arrangements had to be made to take the case before the Zonal Council. The Maharashtra Government did not allow the ink on the S.R.C. Report to dry. They made the claim in 1957. The Mysore Government did not do it. Maharashtrians are particular in doing it. The Commission said that they are going to take cognisance of any claims made by any Government. In fact the Maharashtra Ekikarana Samithi wanted to claim two more villages other than those claimed by Maharashtra Government. He said that the claim made by the Maharashtra Government is a substantial claim. That is a very clear understanding that has been mentioned in his report. Something might have been represented to the State Government. But has this claim been made before the Zonal Council ? This claim is not made. I think the Mysore Government have made a distinction between Kasargod and the boundary dispute with Maharashtra. This Government has viewed its dispute with Maharashtra in one particular aspect. They are very clear in saying that this Kasargod area formerly belonged to the District of Mangalore. But ......

Sri RAMAKRISHNA HEGDE.—May I remind the Hon'ble Member that as long back as 1956-57, the Chief Minister of Mysore negotiated with the than Chief Minister of Kerala about Kasargod and it was agreed that the portion north of Chandragiri River should be given to Mysore. But later on, the Chief Minister of Kerala took some excuse to get out of this position.

Sri B. P. KADAM (Karwar).—I substantiate. I was here in 1956. The Hon'ble Finance Minister was not here. My hon. friend was not here. The Governor of Mysore made a statement in 1956 categorically stating that the Kannadigas of Kasargod, Madakasira, etc. who were outside Mysore, desire to come into Mysore. Sri Nijalingappa, Chief Minister, on 24th December 1956, made a statement that he is in

correspondence with the respective Governments to get back those Kannadiga areas. It is not true to say that the Government of Mysore did not move in the matter.

Mr. DEPUTY SPEAKER.—The allotted time of Sri Shettar, is over. He may please conclude. There are a number of members who want to speak.

Sri S. S. SHETTAR.—I cannot conclude till I finish my arguments. It is not as if I am speaking for the sake of speaking.

Mr. DEPUTY SPEAKER.—The member will please consult his Whip. He has been allotted 20 minutes' time. It is exhausted. So he may please conclude as there are many others to speak.

Sri S. S. SHETTAR.—I request for a little time. Time limit is not generally strictly adhered to. So I also request a little latitude and ask for ten minutes more.

Mr. DEPUTY SPEAKER.—There are a number of hon. Members who want to participate in the debate. The member has already taken 20 minutes time. Still, does he require another ten minutes? I give him only three minutes.

Sri S. S. SHETTAR.—I am speaking with particular reference and context. What is the view we hold about this dispute?

Mr. DEPUTY SPEAKER.—The member will speak for five minutes only and conclude.

Sri S. S. SHETTAR.—I am driving at a different question. My question is about the dispute which was referred to the Four-man Committee and what that Committee stated and in what material respects it differed. Mr. Mahajan has made reference to the findings that are given by this Four-man Committee. Even on the issues of Belgaum and Karwar, he has made a reference to this important body, that is, the Four-man Committee. While on the particular issue of Nippani, I feel that Nippani Town in particular will have to be negotiated. The stand of the Mysore Government is that minor adjustments could be made. Nippani's transfer is not a minor adjustment. I fail to understand then the stand of the Mysore Government. That is why, I am pained to say that consistency is a virtue which cannot be expected in the political field. I really cannot understand the stand of the Mysore Government if it is aggrieved by the Mahajan Report. The Mysore Government say that they are not rejecting the Report. If it is favourable to the Government of Mysore, why do they not say so in clear terms? It is very difficult to understand whether the stand of our Government towards the recommendation of the Mahajan Commission is one way or the other. We are at a loss to understand their stand with regard to Nippani and the surrounding areas, when there is a loss of income to the tune of Rs. 3 crores to the State exchequer by their transfer; we will be the losers.

Sri B. P. KADAM.—I may be permitted to intervene.

Mr. DEPUTY SPEAKER.—No, he has no time.

Sri S. S. SHETTAR.—Though the Government of Mysore is really aggrieved, has this Government any guts to say that this Report has to be rejected because it will cause severe damage and harm to the State? No. In the Council, they have already moved a resolution, accepting the Report of the Mahajan Commission. While welcoming the Report, Government, in my opinion, has not been clear in its mind. It has not taken into consideration the developments that have taken place from time to time. One thing I want to say is in particular, is that in Maharashtra an agitation was started on this boundary dispute. Agitation was the strong weapon of the Maharashtrians. Counter to their agitation, no agitation was conducted here. Once an agitation was launched; it was more for show and the Maharashtrians understood the meaning of the agitation that was launched in this State. I dare say that a case was not properly made out. All right if the Chief Minister of Mysore has got the guts, let him say boldly that till the Mahajan Report is accepted, he is not going to accept the Presidentship of the All-India Congress. If he had threatened like that even to a little extent, certainly the levers in the political field would have moved properly and the situation would have been met. That has not been done by the Chief Minister. He is not clear in his perspective. Whenever certain issues are brought to his notice, it is known to certain persons that he is talking on the matters very lightly. He is taking the situation very easy and the result is, our interests are at great stake; we are the losers. I do not know why this report is going to be accepted and not rejected. A situation will certainly develop when referendum may be asked by the other party. It is not the Government of Mysore which is going to ultimately decide this dispute. Things are developing so fast somewhere else that the Central Government may again yield to the plots of the Maharashtrians as they did on the previous occasions, That is why the Maharashtrian leaders have thought of collecting national opinion on the Mahajan Report. The Government of Maharashtra threatned an agitation and the Central Government appointed the Mahajan Commission. It is pressure tactics that is working there and it is due to that pressure tactics that the whole thing is not properly seen.

Lastly, my particular stand is this. There must be some consistency, some principle. Today if this Mahajan Report is accepted by every State, it is accepted because of party discipline. If it is accepted by somebody else, it may be for any other reason. The Mahajan Report will not be accepted because it is in the interests of the Kannadiga people and because it is for the welfare of the Karnataka people. That is to be seen. Somebody says that it is written by a good judge. Somebody says that some finality must be arrived at. But the interest of the Kannada people as a whole should be looked into. My concluding opinion is, whether this is a good report or bad report, this a report has given some finality. At this stage it is only to be discussed on broad

outlines. When the Bill is introduced in the Parliament, another opportunity will be given to this House to discuss the same in greater detail. So, no positive opinion could be drawn and no positive assertion could be made and no definite stands should be taken at this particular juncture. Our reactions should be conveyed. If any finality is to be given to this report, if the Mysore Government feels that it can bring sufficient pressure on the Central Government, then alone this report can be accepted.

† ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಸಭಾಪತಿಗಳೇ, ಶ್ರೀ ಮೆಹರ್‌ಚಂದ್ ಮಹಾಜನ್ ಅವರು ತನ್ನ ಈ ವಯಸ್ಸಿನಲ್ಲಿಯೂ ಕೂಡ ಕೇಂದ್ರ ಸರ್ಕಾರದವರು ಒಪ್ಪಿಸಿದ ಗಡಿ ಪ್ರಶ್ನೆಯ ಬಗ್ಗೆ ನಾಡಿನಾದ್ಯಂತ ಸಂಚರಿಸಿ ಯಾವ ಪಾಕೀಸ್ತಾನ-ಹಿಂದೂಸ್ಥಾನ ವಿಭಜನೆಯ ಬಗ್ಗೆ ಹೋರಾಡಿ ಒಂದು ಯಶಸ್ಸು ಕಂಡಂತೆ ಈಗ ಇದರ ಪರಿಣಾಮವನ್ನು ತಿಳಿಯುವ ಮೊದಲೇ ನಮ್ಮನ್ನು ಅಗಲದ್ದಾರೆ. ಇದು ಬಹಳ ದುರ್ದೈವ ಸಂಗತಿ. ಇದು ಆಗಬಾರದಾಗಿತ್ತು ಅಂತಹವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ.

ಸ್ವಾಮಿ, ಮೈಸೂರು ಮತ್ತು ಮಹಾರಾಷ್ಟ್ರಗಳ ಗಡಿ ಹೊಂದಾಣಿಕೆ ಕೊನೆಯದಾಗಿ ತೀರ್ಮಾನವಾಗಲೆಂದು ರಾಷ್ಟ್ರಾಭಿಮಾನಿಗಳೆಲ್ಲರೂ ಬಯಸುತ್ತಿದ್ದಾರೆ ಅಂತೆಯೇ ಕೇಂದ್ರ ಸರ್ಕಾರ ಏಕ ಸದಸ್ಯ ಆಯೋಗ ನೇಮಿಸಲು ನಿರ್ಧರಿಸಿದರು. ಆಗ ಏಕ ಸದಸ್ಯ ಆಯೋಗ ಕೂಡದೆಂದು ಮೈಸೂರಿನವರು ಪ್ರಬಲವಾಗಿ ತಿರಸ್ಕರಿಸಿದರು. ಆಗ ಮಹಾರಾಷ್ಟ್ರ ಮುಖಂಡರು ಏಕ ಸದಸ್ಯ ಆಯೋಗವನ್ನು ಬಲವಾಗಿ ಪುರಸ್ಕರಿಸಿದರು. ಇದರ ಫಲವಾಗಿ ಶ್ರೀ ಮಹರ್‌ಚಂದ್ ಮಹಾಜನ್ ಆಯೋಗದ ಕೊಡುಗೆ ಬಂದಿತು. ನಮಗೆ ಅನ್ಯಾಯವಾದರೂ ಚಿಂತೆಯಿಲ್ಲ, ಸೋದರತ್ವದಿಂದ ಭಾವೈಕ್ಯತೆಯಿಂದ ಬಾಳೋಣ ಎಂದು ಮೈಸೂರಿನವರು ಮಹಾಜನ್ ಕೊಡುಗೆಯನ್ನು ಪುರಸ್ಕರಿಸಿದರು. ಮಹಾಜನ್ ಆಯೋಗವನ್ನು ಪುರಸ್ಕರಿಸಿದ್ದ ಮಹಾರಾಷ್ಟ್ರೀಯರೇ, ಅವರ ಕೊಡುಗೆಯನ್ನು ತಿರಸ್ಕರಿಸಿದ್ದಾರೆ. ಇದೆಂತಹ ವಿಚಿತ್ರ ! ಪದೇ ಪದೇ ಊಸರವಳ್ಳಿಯಂತೆ ಬಣ್ಣ ಬದಲಾಯಿಸುವ ಗತ್ತುಗಾರಿಕೆ, ರಾಷ್ಟ್ರೀಯ ತತ್ವದೊಂದಿಗೆ ಕಣ್ಣುಮುಚ್ಚಾಲೆಯಾಡುವ ಹುಡುಗಾಟಿಕೆ, ಮಹಾರಾಷ್ಟ್ರೀಯರ ರಾಕ್ಷಸೀ ಮಹತ್ವಾಕಾಂಕ್ಷೆಗೆ ಇತಿ-ಮಿತಿ ಬೇಡವೇ ? ಎಂದು ಸಣ್ಣಮಕ್ಕಳೂ ಪ್ರಶ್ನಿಸುವಂತಾಗಿದೆ. ಕೊಲ್ಹಾಪುರ, ಸೊಲ್ಹಾಪುರ, ಸಾಂಗ್ಲಿ, ಬೀದರ್ ಮುಂತಾದ ಪ್ರದೇಶಗಳಲ್ಲಿ ನಮಗೆ ಭಾಷೆ, ಸಂಸ್ಕೃತಿ ಮತ್ತು ಭೌಗೋಳಿಕವಾಗಿ ಬರಬೇಕಾದಂಥ ಅನೇಕ ಪ್ರದೇಶಗಳು ಮಹಾಜನ್ ಆಯೋಗದಲ್ಲಿ ನಿಲುಗಡೆಯಾಗಿವೆ. ಆದರೂ ರಾಷ್ಟ್ರೀಯತೆಯಿಂದ ನಾವು ಒಪ್ಪಿಕೊಳ್ಳಲು ಸಿದ್ಧರಾಗಿದ್ದೇವೆ. ತಮ್ಮ ಪ್ರೋತ್ಸಾಹದಿಂದ ನೇಮಕವಾದ ಮಹಾಜನ್ ಆಯೋಗದ ಕೊಡುಗೆಯನ್ನು ಮಹಾರಾಷ್ಟ್ರೀಯರು ತಿರಸ್ಕರಿಸುತ್ತಿರುವುದು ಅನ್ಯಾಯದ ಪರಮಾವಧಿಯೆಂದು ಬೇರೆ ಹೇಳಬೇಕಾಗಿಲ್ಲ. ಘೇರಾವೊ, ಚಳುವಳಿ, ವಗೈರೆ, ಇಲ್ಲದಸಲ್ಲದ ಗೊಂದಲ—ಬೆದರಿಕೆಗಳಿಂದ ತಮ್ಮ ಮಹತ್ವಾಕಾಂಕ್ಷೆ ಈಡೇರಿಸಿಕೊಳ್ಳಬೇಕೆಂದು ಹೇಳುತ್ತಿರುವುದು ಹುಚ್ಚುತನವಲ್ಲದೆ ಮತ್ತೇನು ? ಈ ಹುಚ್ಚಾಟಕ್ಕೆ ಕೇಂದ್ರ ಸರ್ಕಾರದವರು ಸ್ವಲ್ಪ ಮಾತ್ರ ಅವಕಾಶಕೊಟ್ಟರೂ ಸಹ ಇದು ಸಮಗ್ರಭಾರತದ ರಾಷ್ಟ್ರೀಯ ಐಕ್ಯತೆಗೆ ಅನಿಷ್ಟ ಉಂಟಾದೀತೆಂದು ಉಗ್ರತೆಯಿಂದ ಎಚ್ಚರಿಸಬೇಕಾಗಿದೆ. ಇಷ್ಟೇ ಅಲ್ಲ. ಒಂದುವೇಳೆ ಸೂರ್ಯನಗತಿ ಚಲಿಸದೆ ನಿಲ್ಲಬಹುದು, ಬೆಳಗಾವಿ ಕಾರವಾರಗಳ ಕನಸೂ ಸಹ ಮಹಾರಾಷ್ಟ್ರೀಯರಿಗೆ ಬೀಳದಂತೆ ನಿರೋಧಿಸುವ ತೆಜಸ್ಸು-ಓಜಸ್ಸು ಕನ್ನಡಿಗರಿಗೆ ಉಂಟೆಂದು ಈ ಪ್ರಸಂಗದಲ್ಲಿ ಸ್ಪಷ್ಟಪಡಿಸಬೇಕಾಗಿದೆ.

ಮಹಾರಾಷ್ಟ್ರ ಮುಖಂಡರ ಅಂದು ಮತ್ತು ಇಂದಿನ ಕೇಳಿಕೆ ಹೇಳಿಕೆಗಳನ್ನು ಕೇಳಿದರೆ ಹಾಗೂ ನೋಡಿದರೆ ನಗು ಬರುವಂತಿದೆ. Facts speaks themsleves ಎಂಬ ಪ್ರಕಟಣೆ ಓದಿದರೆ ಅವರ ಮಾತಿನ ಬೆಲೆ ದುಗ್ಗಾಣಿಗೂ ಕಡಿಮೆಯಾಗುವುದರಲ್ಲಿ ಸಂದೇಹವೇ ಇಲ್ಲ. ಮಹಾರಾಷ್ಟ್ರೀಯರು ಬೆಳಗಾಂ, ಕಾರವಾರ ಕೇಳುವುದೂ ಒಂದೇ, ತಮಿಳುನಾಡಿನವರು ಬೆಂಗಳೂರು ಕೇಳುವುದೂ ಒಂದೇ ಕನ್ನಡದ ರಾಜಧಾನಿ ಮದ್ರಾಸಿಗೆ ಹೋದಾಗ, ಕನ್ನಡದ ಗಂಡುಮೆಟ್ಟಿನ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬಹುದು. ಆಗ ಪೂನಾ, ಬೊಂಬಾಯಿ, ಅಹಮದ್‌ನಗರ, ನಾಗಪುರ ಇತ್ಯಾದಿ ಕನ್ನಡಿಗರಿಗೆ ಬರಬಹುದು. ಈ ವಾದವೆಲ್ಲ ಹೇಗಿದೆಯೆಂದರೆ, ಚಿಕ್ಕಮ್ಮ ಗಂಡಸಾದರೆ ಚಿಕ್ಕಪ್ಪ ಎನ್ನುತ್ತೇವೆ ಎಂದಂತಾಗುತ್ತದೆ. ಚಿಕ್ಕಮ್ಮನನ್ನು ಚಿಕ್ಕಪ್ಪನನ್ನಾಗಿ ಮಾಡ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಹೊರಟಿರುವ ಮಹಾರಾಷ್ಟ್ರೀಯರ ಪ್ರಯತ್ನಕ್ಕೆ ಗಾಂಪರೊಡೆಯರು ಮಾತ್ರ ಅಸ್ತು ಎನ್ನಬಹುದು. ಒಂದುವೇಳೆ ಪುರಂದರದಾಸರು ಏನಾದರೂ ಈಗ ಇದ್ದಿದ್ದರೆ ನಗೆಯುಬರುತಿದೆ, ಎನಗೆ ನಗೆಯು ಬರುತಿದೆ, ಮಹಾರಾಷ್ಟ್ರ ದೇಶದವರ ಬಗೆಬಗೆಯ ಮಾತ ಕೇಳಿ ಎಂದು ಹೇಳುತ್ತಾ ಮಹಾರಾಷ್ಟ್ರದೇಶಕ್ಕೆ ಪ್ರಚಾರಕ್ಕೆ ಹೋಗುತ್ತಿದ್ದರು. ಸ್ವತಃ ಛತ್ರಪತಿ ಶಿವಾಜಿಯವರೇ ಇವರ ತಿಳಿಗೇಡಿತನಕ್ಕೆ ಛೀಮಾರಿ ಹಾಕುತ್ತಿದ್ದರೆಂಬುದರಲ್ಲಿ ಸಂಶಯವೇ ಇಲ್ಲ. ದೇಶಾಭಿಮಾನ, ಸೋದರತ್ವ ಭಾವೈಕ್ಯತೆಗಳ ಕೊರತೆಯುಳ್ಳ ಸ್ವಾರ್ಥಲಾಲಸೆಯವರ ಮುಂದೆ ಏನು ಹೇಳಿದರೂ ಗೋರ್ಕಲ್ಲ ಮೇಲೆ ಮಳೆಗರದಂತೆ ಆಗುತ್ತದೆ. ಇವರ ರೀತಿನೀತಿಗಳನ್ನು ಸ್ವಲ್ಪ ಹೇಳಬಯಸುತ್ತೇನೆ. ಮುಂಜಾನೆ ತಿಳಿ ಹಳದಿ, ಮದ್ಯಾಹ್ನ ಕರೀಬಣ್ಣ, ಸಂಜೆಯಲ್ಲಿ ಓಕುಳಿಯಂತಹ ಮಿಶ್ರಬಣ್ಣ, ಓತಿಕಾಟವೇ ಬೇಕೆ ಬದಲಿಸಲು ಈ ಬಣ್ಣ ಕಲಿತಿಹನು ಈ ಕರೆಯ ಮಹಾರಾಷ್ಟ್ರದಣ್ಣ. ತಾಸುತಾಸಿಗೂ ದಿನದಿನಕ್ಕೂ ಅವರು ಬದಲಾಯಿಸುವುದನ್ನು ನೋಡಿದರೆ, ಈ ರೀತಿ ಅಗಬಾರದು, ಇದು ಒಳ್ಳೆಯ ಲಕ್ಷಣವಲ್ಲವೆಂದು ನಾನು ಮಾತ್ರ ಹೇಳುತ್ತೇನೆ. ಶ್ರೀಗಳಾದ ಫಜ್ಲಾಲಿ, ಪಣಿಕ್ಕರ್, ಪಾಟಸ್ಕರ್ ಮಹಾಜನ್ ಇವರೆಲ್ಲಾ ಏಕೆ ಬೇಕಾಗಿತ್ತು ? ಇವರು ಶಿವಸೇನೆಯನ್ನು ಕಟ್ಟಲು ಏಕೆ ಅಪೇಕ್ಷೆಪಡಬೇಕಾಗಿತ್ತು ? ಈಗ ಶಿವಸೇನೆಯೆಂಬ ಒಂದು ಗುಂಪನ್ನು ಕಟ್ಟಿದ್ದಾರೆ. ಆ ಶಿವಸೇನೆಯನ್ನು ಶಿಳ್ಳು ಹೊಡೆಸುತ್ತಾ ನುಗ್ಗಿಸಿ ತಮಗೆ ಬೇಕಾದ ಕನ್ನಡ ಪ್ರದೇಶವನ್ನೆಲ್ಲಾ ಸಾಧ್ಯವಾಗಿದ್ದರೆ ಆಕ್ರಮಿಸಿಕೊಳ್ಳಬಹುದಾಗಿತ್ತಲ್ಲವೆ ? ಈ ಭಾವನೆ ಇದ್ದರೂ ಇರಬಹುದೇನೋ ? ಅಂತೆಯೇ ಶಿವಸೇನೆಯ ಚೆಲ್ಲಾಟ ಸಾಗುತ್ತಾ ಇದೆ. ಶಿವಸೇನೆಯ ಚೆಲ್ಲಾಟ ನೋಡಿ ನನಗೆ ಗುಜರಾತಿನ ಸೋಮೇಶ್ವರ ದೇವಸ್ಥಾನಕ್ಕೆ ಮಹಮದ್ ಘೋರಿ ಧಾಳಿಮಾಡಿದ್ದು ಜ್ಞಾಪಕಕ್ಕೆ ಬರುತ್ತಿದೆ. ಸೋಮೇಶ್ವರ ದೇವಸ್ಥಾನದಲ್ಲಿ ಸಂಪತ್ತು ತುಂಬಾ ಇದ್ದಿತು. ಅಲ್ಲಿ ಅರ್ಚಕ ವರ್ಗದವರೇ ಹತ್ತುಸಾವಿರ ಮಂದಿ ಇದ್ದರು. ಘೋರಿ ಧಾಳಿ ಮಾಡಲು ಬರುತ್ತಾನೆಂದು ಅರ್ಚಕರಿಗೆ ತಿಳಿಯಿತು. ಅಯ್ಯೋ, ಅವನು ಮ್ಲೇಂಛ ನಾವು ದೇವಸ್ಥಾನದ ಸುತ್ತ ಮಡಿಬಟ್ಟೆ ಕಟ್ಟಿಸಿ ಮಂತ್ರ ಘೋಷ ಮಾಡಿದರೆ ವಾಪಸ್ಸು ಹೊರಟುಹೋಗುತ್ತಾನೆಂದು ಅದೇರೀತಿ ಮಾಡಿದರು. ಘೋರಿ ಮಡಿಬಟ್ಟೆಗಳನ್ನೆಲ್ಲಾ ಸುಟ್ಟು ನುಗ್ಗಿದ ಕೂಡಲೇ ಅರ್ಚಕರು ಹೇಳದೆ ಕೇಳದೆ ಪಲಾಯನ ಮಾಡಿದರು. ಮಹಮದ್ ಘೋರಿ ತನ್ನ ಕೆಲಸಮಾಡಿಕೊಂಡು ಹೊರಟುಹೋದ. ಇದರಂತೆ ಬೆಳಗಾವಿಗಾಗಿ ಮಹಾರಾಷ್ಟ್ರೀಯರು ಮಡಿಬಟ್ಟೆ ಕಟ್ಟಿ ಮಂತ್ರ ಹೇಳಿದರೂ ಬೆಳಗಾವಿಯ ನಮ್ಮ ಸಂಪತ್ತನ್ನು ಮಹಮದ್ ಘೋರಿಯಂತೆ ಉಳಿಸಿಕೊಳ್ಳುತ್ತೇವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅವರ ಸಂಕುಚಿತ, ಸ್ವಾರ್ಥನೀತಿ. ಯಾವ ರೀತಿಯಲ್ಲಿ ಹೋಗುತ್ತಿದ ಎಂಬುದಕ್ಕಾಗಿ ಹೇಳುತ್ತಿದ್ದೇನೆ. ಮುಂದೆ ಸಾಂಗ್ಲಿಯಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನವನ್ನು ಪ್ರತಿಬಂಧಿಸುತ್ತಾರಂತೆ. ಇದೇನು ಮಹಮದ್‌ಬಿನ್ ತೊಗಲಖ್‌ನ ಕಾಲವೆಂದು ಮಹಾರಾಷ್ಟ್ರೀಯರು ತಿಳಿದಿದ್ದಾರೆಯೋ ಏನೋ ಎಂದು ನಾನು ಪ್ರಶ್ನೆಮಾಡುತ್ತಿದ್ದೇನೆ.

ಹೀಗೆ ಇಷ್ಟನ್ನು ಮಾತ್ರ ಅವರ ಬಗ್ಗೆ ಹೆದರಿಕೆ, ಬೆದರಿಕೆ ಬಗ್ಗೆ ಹೇಳಬಲ್ಲೆ. ಒಬ್ಬ ಹಸಿದ ಶ್ಯಾನುಭೋಗ ಗೌಡರಿಗೆ ಹಾಕಿದಷ್ಟೆ ಇವರ ಮರ್ಮ ಎಂದು. ಒಬ್ಬ ಶ್ಯಾನುಭೋಗ ಸಂಚಾರ ಹೊರಟಿದ್ದ. ಎಲ್ಲಿ ಹೊಟ್ಟೆ ಹಸಿಯುತ್ತದೆಯೋ ಅಲ್ಲಿ ಗೌಡರಮನೆಗೆ ಹೋಗಿ ಊಟದ ವ್ಯವಸ್ಥೆ ಮಾಡಿಸುತ್ತೀರೋ ಇಲ್ಲವೇ ಹಿಂದಿನೂರಿನ ಗೌಡರಿಗೆ ಮಾಡಿದಂತೆ ಮಾಡಲೋ ? ಎಂದು ಹೇಳುತ್ತಿದ್ದ. ಹಿಂದಿನೂರಿನಲ್ಲಿ ಏನು ಮಾಡಿದರೋ ಏನೋ ಎಂಬ ಅಂಜಿಕೆಯಿಂದ ಊಟದ ವ್ಯವಸ್ಥೆ ಮಾಡುತ್ತಿದ್ದರು. ಹಿಂದಿನೂರಿನಲ್ಲಿ ಏನು ಮಾಡಿದಿರಿ ಎಂದು ಗೌಡ ಕೇಳುತ್ತಿದ್ದ. ಮಾಡುವುದೇನು ಮಣ್ಣು, ಊಟ ಸಿಗದೆ ಉಪವಾಸ ಮಾಡುತ್ತಿದ್ದೆ ಎಂದು ಹೇಳಿ ಮುಂದೆ ಹೋಗುತ್ತಿದ್ದರು. ಈ ವಿಚಾರ ಕ್ರಮೇಣ ಎಲ್ಲರಿಗೂ ಗೊತ್ತಾಗಿ ಶಾನುಭೋಗರ ಬೆದರಿಕೆಗೆ ಯಾರೂ ಅಂಜುತ್ತಿರಲಿಲ್ಲ. ನಂತರ ಶ್ಯಾನುಭೋಗರು ತಮ್ಮ ಊರಿಗೆ ಹೋಗಬೇಕಾಯಿತು. ಮಹಾರಾಷ್ಟ್ರೀಯರ ಗುಟ್ಟಾದರೂ ಇಷ್ಟೆ. ಮಾತಿನ ಧೋರಣೆ, ಶಿವಸೇನೆಯ ಮಡಿಬಟ್ಟೆ, ಮಂತ್ರ ಘೋಷ, ಘೇರಾವೋ ಚಳುವಳಿ ಇತ್ಯಾದಿಗಳಿಂದ ತಮ್ಮ ಇಷ್ಟಾರ್ಥ ಸಾಧಿಸಿಕೊಳ್ಳಬೇಕೆಂದಿರುವುದು ಎಲ್ಲರಿಗೂ ಗೊತ್ತಾಗಿದೆ. ಇದಕ್ಕೆ ಸೊಪ್ಪು ಹಾಕುವವರು ಯಾರು ? ಮೋಡಿಗೆ ಮೋಡಿ ವಿದ್ಯೆಯನ್ನು ಈಗ ಕನ್ನಡಿಗರೂ ಕಲಿತಿದ್ದಾರೆ. ''ಶಿವಸೇನೆಗೆ ಇದಿರಾಗಿ ಹರಸೇನೆ ಕಳಿಸಬಲ್ಲ'' ರೆಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲ. ''ಸರಿಯಬಹುದು ಒಂದುವೇಳೆ ಅಚಲಗಿರಿ ಹಿಮಾಲಯ, ತೊರೆಯಲಾರೆ ಬೆಳಗಾವಿ ನಮ್ಮದೆಂಬ ಧ್ಯೇಯ.''

10-30 A.M.

ಕೊನೆಯದಾಗಿ ನನ್ನ ಬಯಕೆ ಇಷ್ಟೆ, ಗಡಿ ಹೊಂದಾಣಿಕೆ ರಾಷ್ಟ್ರೀಯ ಪ್ರಶ್ನೆ ಸೋದರತ್ವದ ಪ್ರಶ್ನೆ. ಈ ದೃಷ್ಟಿಯಿಂದ ಲಾಭವೋ ನಷ್ಟವೋ ಮಹಾಜನ್ ಕೊಡುಗೆಯನ್ನು ಒಪ್ಪಿಕೊಂಡಿದ್ದೇವೆ. ಇದರಂತೆ ಮಹಾರಾಷ್ಟ್ರ ಸೋದರರೂ ಒಪ್ಪಬೇಕಾದ್ದು ಜಾಣತನ. ಹಾಗಾದರೆ ಚಂಡಿತನವನ್ನೇ ಮುಂದುವರಿಸಿದರೆ ಖಂಡಿತ ಆ ಬಗ್ಗೆ ಅಖಂಡ ಭಾರತದ ತಿರಸ್ಕಾರದ ದಂಡನೆಗೆ ಗುರಿಯಾಗ ಬೇಕಾದೀತೆಂದು ಮಹಾರಾಷ್ಟ್ರೀಯರಿಗೆ ವಿನಂತಿಸುತ್ತೇನೆ. ಕೇಂದ್ರ ಸರ್ಕಾರವೂ ಸಹಾ ಮೀನ ಮೇಷ ಎಣಿಸದೆ ಧಿಟ್ಟತೆಯಿಂದ ವರದಿಯನ್ನು ಅಂಗೀಕರಿಸಿ ಈ ಪ್ರಶ್ನೆಯನ್ನು ಮುಕ್ತಾಯಗೊಳಿಸಲೇ ಬೇಕೆಂದು ಒತ್ತಾಯಿಸುತ್ತೇನೆ.

ಮೈಸೂರು ಮಹಾರಾಷ್ಟ್ರಗಡಿ ಇತ್ಯರ್ಥದಬಗ್ಗೆ ಮತ್ತೊಂದು ಹೊಸಸೂಚನೆ ಕೇಂದ್ರ ಸರ್ಕಾರದ ಗೃಹಸಚಿವರಿಂದ ಬಂದಿದೆಯೆಂದು ತಿಳಿದುಬಂತು. ಇಂತಹ ಹೊಸ ಸಲಹೆಗಳು ಯಾರಿಂದಲೇ ಬರಲಿ ಇದನ್ನು ಅಮಾನ್ಯ ಮಾಡುತ್ತೇವೆ. ಇಂತಹ ಹೊಸ ಸಲಹೆ ಕರ್ನಾಟಕಕ್ಕೆ ಕರ್ಕಶವಾದ ವಿಚಾರವೆಂದು ಒಕ್ಕೊರಲಿನಿಂದ ತಿರಸ್ಕರಿಸುತ್ತೇವೆ.

ನುಡಿದಂತೆ ನಡೆಯದೆ ಅಡಿಗಡಿಗೆ ಒಂದೊಂದ
ಬಡಬಡಿಸುವ ಈ ನಾಡಕೇಡಿಗರ ನುಡಿಯ
ಕೇಂದ್ರದ ಒಡೆಯರು ಕಡೆಗಣಿಸಿದರೆ
ಮೈಡನು ಮೆಚ್ಚುವನಯ್ಯಾ—ಸಭಾಪತಿ ವೈಕುಂಠಬಾಳಿಗಾ.

ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER in the Chair]

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಮಹಾಜನ್ ಸಮಿತಿಯ ವರದಿಯನ್ನು ನಾವು ಚರ್ಚೆ ಮಾಡುವ ಕಾಲದಲ್ಲಿ ಈ ಮಹಾಜನ್ ಸಮಿತಿಯು ನೇಮಕ ಆಗತಕ್ಕ ವಿಚಾರದ ಬಗ್ಗೆ ಒಂದೆರಡು ವಿಚಾರಗಳ ಹಿನ್ನಲೆಯನ್ನು ಹೇಳುವುದಾದರೆ, ಈ ಮಹಾಜನ್ ಸಮಿತಿಯನ್ನು ಏರ್ಪಾಡು ಮಾಡುವುದರ ಬಗ್ಗೆ ನಾವು ಈ ಏಕ ಸದಸ್ಯ ಆಯೋಗದ ನೇಮಕವನ್ನು ಬಹುವಾಗಿ ಟೀಕಿಸಿದ್ದೇವೆ; ವಿರೋಧಿಸಿದ್ದೇವೆ. ಈ ಮಹಾಜನ್ ಸಮಿತಿಯು ಏರ್ಪಾಟು ಆದದ್ದನ್ನು ಮೈಸೂರು ಸರ್ಕಾರದವರೂ ಕೂಡ ಈ ಏಕ ಸದಸ್ಯ ಆಯೋಗವನ್ನು ನಮ್ಮ ಮೇಲೆ ಹೇರಬಾರದು ಎಂದು ಹೇಳಿ ತಮ್ಮ ಪ್ರತಿಭಟನೆಯನ್ನು ಮೊದಲಿನಿಂದ ಸಲ್ಲಿಸುತ್ತಾ ಬಂದಿದೆ; ಮತ್ತು ನಮ್ಮ ವಿರೋಧಪಕ್ಷದವರೂ ಕೂಡ ಮೈಸೂರು ದೇಶದಲ್ಲಿ ಈ ಗಡಿ ಸಮಸ್ಯೆಯನ್ನು ಬಗೆಹರಿಸುವುದಾದರೆ ಬಿಡಿ ಬಿಡಿಯಾಗಿ ಕೇವಲ, ಮಹಾರಾಷ್ಟ್ರ-ಮೈಸೂರು ಗಡಿ, ಮೈಸೂರು-ಕೇರಳ ಗಡಿ ಹೀಗೆ ಬಿಡಿ ಬಿಡಿಯಾಗಿ ತೆಗೆದುಕೊಂಡು ಒಬ್ಬರ ಒತ್ತಾಯಕ್ಕೆ ಒಳಗಾಗಿ ಮಾಡತಕ್ಕ ಕಾರಣವಿಲ್ಲ ಎಂದು ನಾವು ಹೇಳಿದ್ದೇವೆ.

ನಮ್ಮ ಮೈಸೂರು ಸರ್ಕಾರದವರು ಆ ರೀತಿ ಹೇಳಿದರೂ ಕೂಡ ಕೊನೆಗೆ ಕಾಂಗ್ರೆಸ್ ಹೈಕಮ್ಯಾಂಡ್‌ನಲ್ಲಿ ಮತ್ತು ಕೇಂದ್ರದಲ್ಲಿ ಅವರ ಒತ್ತಾಯಕ್ಕೆ ಮಣಿಯಬೇಕಾಯಿತು. ಈ ಒಂದು ಆಯೋಗದ ಶಿಶು ಉತ್ಪತ್ತಿ ಆದದ್ದು ಮಹಾರಾಷ್ಟ್ರದವರಿಂದ. ಶ್ರೀಮಾನ್ ಚವಾಣರು ಮತ್ತು ಶ್ರೀಮತಿ ಇಂದಿರಾಗಾಂಧಿಯವರಿಂದ ಈ ಮಹಾಜನ್ ಕಮಿಷನ್ ಈ ದೇಶದಲ್ಲಿ ಉತ್ಪತ್ತಿಯಾಯಿತು. ಇವೊತ್ತಿನ ದಿವಸ ಯಾರ ಗರ್ಭದಿಂದ ಈ ಶಿಶು ಜನನವಾಯಿತೋ ಅವರು, ಅದನ್ನು ಹೆತ್ತ ತಂದೆ ತಾಯಿಗಳು ಎಂದರೆ ಮಹಾರಾಷ್ಟ್ರದ ನಾಯಕರು ಈ ಮಹಾಜನ್ ವರದಿ ನಮಗೆ ಬೇಕಾಗಿಲ್ಲ, ಇದರಲ್ಲ ನಮಗೆ ಪ್ರೇಮವಿಲ್ಲ ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿದು ಕೊಳ್ಳದೆ ಈ ಮಹಾಜನ್ ಸಮಿತಿಯನ್ನು ನೇಮಕಮಾಡಿದಂತಹ ಕೇಂದ್ರದ ಗೃಹಖಾತೆಯ ಸಚಿವರು, ಈ ವರದಿಯನ್ನು ಒಪ್ಪತಕ್ಕಂಥಹ ಕೇಂದ್ರದ ಗೃಹಖಾತೆಯವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂಬುದು ಇವೊತ್ತಿನ ಬೆಳಗಿನ ಪತ್ರಿಕೆಯಲ್ಲಿ ಬಂದಿದೆ. ಅವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂಬುದನ್ನು ನಾವು ಬಹಳ ಗಹನವಾಗಿ ವಿಚಾರ ಮಾಡಬೇಕಾಗಿದೆ. ಲೋಕ ಸಭೆಯಲ್ಲಿ, ಪಾರ್ಲಿಮೆಂಟ್ ಅಧಿವೇಶನದಲ್ಲಿ ಸರ್ಕಾರದ ಪತಿಯಿಂದ, ಸರ್ಕಾರದ ಪರವಾಗಿ ಗೃಹಶಾಖೆಯ ಮಂತ್ರಿಗಳು ಏನು ಹೇಳಿದ್ದಾರೆಂದರೆ, ಮಹಾಜನ್ ವರದಿಯ ಬಗ್ಗೆ ಗಡಿ ಸಮಸ್ಯೆಯನ್ನು ಬಗೆ

(ಶ್ರೀ ಎಸ್. ಶಿವಪ್ಪ)

ಹರಿಸಲು ರಾಷ್ಟ್ರೀಯ ಒಟ್ಟು ಅಭಿಪ್ರಾಯವನ್ನು ಶೇಖರಣೆ ಮಾಡುತ್ತೇವೆ, ಅದನ್ನು ಶೇಖರಣೆ ಮಾಡಿದಮೇಲೆ ಅದರಿಂದ ಉತ್ಪನ್ನವಾಗತಕ್ಕ ಅಂಕಿ ಅಂಶಗಳನ್ನು ಮನಗಂಡು ಮುಂದೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತೇವೆ ಎಂದು ಲೋಕಸಭೆಯಲ್ಲಿ ಹೇಳಿದ್ದಾರೆ. ಈ ವರದಿಯನ್ನು ಕಾರ್ಯಗತ ಮಾಡತಕ್ಕಂಥವರು ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಈ ತೀರ್ಪನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ, ಇನ್ನೂ ಇದನ್ನು ಚರ್ಚೆ ಮಾಡಬೇಕು, ಎಂದು ಅವರು ಹೇಳಿರುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ಈ ವಿಚಾರದಲ್ಲಿ ಮೊದಲನಿಂದಲೂ ಹೇಳುತ್ತಾ ಬಂದಿದ್ದಾರೆ. ಇಲ್ಲಿ ನಮಗೆ ಕೊಟ್ಟಿರತಕ್ಕಂಥ 'Volte Face of Maharashtra on Border Dispute' ಎನ್ನುವ ಪುಸ್ತಕದಲ್ಲಿ ಈ ರೀತಿ ಬರೆದಿದ್ದಾರೆ :—

"...by the passing at dead of night on May 23, 1966 of a resolution requesting the Government of India to appoint a One Man Commission for solving the boundary dispute between Maharashtra and Mysore. Sri Nijalingappa, the Chief Minister of Mysore was opposed to the appointment but he was prevailed upon on the ground that it was the only way to give finality to the question."

ಏಕ ಸದಸ್ಯ ಆಯೋಗವನ್ನು ನಮ್ಮ ಮೇಲೆ ಹೇರಬಾರದು ಎನ್ನುವ ನಿಲುವನ್ನು ತೆಗೆದುಕೊಂಡಿದ್ದಾರೆ. ಅವರ ಮೇಲೆ ಒತ್ತಾಯ ಹಾಕಿ ಪ್ರತಿಭಟನೆ ಮಾಡತಕ್ಕ ಶಕ್ತಿ ಇಲ್ಲದೆ ಅರ್ಧ ರಾತ್ರಿಯಲ್ಲಿ ಸೇರಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಾಡಿದಂತಹ ನಿರ್ಣಯವನ್ನು ಶ್ರೀಮಾನ್ ನಿಜಲಿಂಗಪ್ಪನವರು ಒಪ್ಪಿಕೊಂಡು ಬಂದರು. ಕೇಂದ್ರದಲ್ಲಿ ಒತ್ತಾಯವನ್ನು ಹಾಕಿ ಗಡಿಬಿಡಿ ಮಾಡುವುದಕ್ಕೆ ಇವರಿಗೆ ಶಕ್ತಿಯಿಲ್ಲ. ಆ ಹೊತ್ತು ಯಾವುದನ್ನು ಬೇಡ ಎಂದರೋ ಅದನ್ನು ಒಪ್ಪಿಕೊಂಡಿದ್ದಾರೆ. ಇವೊತ್ತು ಯಾವುದನ್ನು ಬೇಕು ಎಂದು ಹೇಳುತ್ತಾರೆಯೋ ಅದನ್ನೂ ಬೇಡ ಎಂದು ಹೇಳುತ್ತಾರೆ. ಏನು ಆಗಬೇಕಾದರೂ ನಿಮ್ಮಿಂದ ಸಾಧ್ಯವಿಲ್ಲ. ಕೇಂದ್ರದವರು ಏನು ಹೇಳುತ್ತಾರೆಯೋ ಅದನ್ನು ಒಪ್ಪಿಕೊಳ್ಳತಕ್ಕದ್ದು ನಿಮ್ಮ ನೀತಿಯಾಗಿದೆ. ಏಕಸದಸ್ಯ ಆಯೋಗವನ್ನು ನೀವು ಬೇಡ ಎಂದು ಹೇಳಿದಿರಿ, ಅವರು ಬೇಕು ಎಂದು ಹೇಳಿದಾಗ ನೀವು ತಲೆ ಬಗ್ಗಿಸಿ ಒಪ್ಪಿಕೊಂಡಿದ್ದೀರಿ. ಈ ಏಕ ಸದಸ್ಯ ಆಯೋಗದ ನೇಮಕದ ಬಗ್ಗೆ ಒಂದು ದೊಡ್ಡ ಚಳುವಳಿಯನ್ನೇ ಮಾಡಿದ್ದಾರೆ. ರೈಲ್ವೆ ಸತ್ಯಾಗ್ರಹವನ್ನು ಮಾಡಿದ್ದಾರೆ. ಮಂತ್ರಿಗಳೂ ರಾಜಿನಾಮೆಯನ್ನು ಕೊಡುತ್ತೇವೆಂದು ಹೇಳಿದರು. ಆದರೂ ಕೂಡ ಕೇಂದ್ರದವರು ಏಕಸದಸ್ಯ ಆಯೋಗವನ್ನು ನೇಮಕ ಮಾಡಿದರು. ಯಾವಾಗ ಆಯೋಗ ನೇಮಕವಾಯಿತೋ ಅದರಿಂದ ನಾವು ಏನು ಹೇಳಿದರೂ ನಡೆಯುತ್ತದೆ ಎಂದು ಕೇಂದ್ರದವರು ತಿಳಿದುಕೊಂಡರು. ಈಗ ಮಹಾಜನ್ ಕಮಿಷನ್ನಿನ ವರದಿಯನ್ನು ಒಪ್ಪಿಸಿದಾಗ ಈ ರೀತಿ ಹೇಳಿದ್ದಾರೆ:

"My dear Home Minister,

By their Resolution of the 25th October 1966, the Government of India appointed me as the One-Man Commission to enquire into and make recommendations regarding the boundary disputes between Maharashtra and Mysore and Mysore and Kerala. I took charge on 15-11-1966. I have now concluded the enquiry and am submitting herewith the report containing my recommendations on the matters entrusted to me."

ಆ ಹೊತ್ತು ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಏಕಸದಸ್ಯ ಆಯೋಗ ನೇಮಕವಾಯಿತು. ಇವೊತ್ತು ಆ ಆಯೋಗದ ವರದಿ ಬಂದಮೇಲೆ ಇದನ್ನು ಕೇಂದ್ರ ಸರ್ಕಾರದವರು, ಶ್ರೀಮಾನ್ ಚವಾಣ್ ಅವರು ಏನು ಮಾಡುತ್ತಾರೆಂಬುದು ನಮಗೆ ಗೊತ್ತು. ಈ ವರದಿಯ ಬಗ್ಗೆ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ದೃಢವಾದ ನಿಲುವು ಏನು ಎಂಬುದನ್ನು ಹೇಳಿಲ್ಲ. ಮಹಾಜನ್ ಕಮಿಷನ್ನಿನವರು ಏನು ವರದಿಯನ್ನು ಕೊಟ್ಟಿದ್ದಾರೆಯೋ ಅದು ಒಂದು ಅವಾರ್ಡ್ ಎಂದು ಹೇಳು

ತ್ತಿದ್ದಾರೆ. ಈ ಮಹಾಜನ್ ಕಮಿಷನ್ನಿನ ವರದಿಯ ಬಗ್ಗೆ ಇವೊತ್ತು ಒಂದು ಆಖೈರಾದ ಅಭಿಪ್ರಾಯವನ್ನು ಕೊಡತಕ್ಕ ಕೇಂದ್ರದ ಗೃಹ ಖಾತೆಯವರು ಏನು ಹೇಳುತ್ತಿದ್ದಾರೆ ಎಂದರೆ, ಈ ಮಹಾಜನ್ ಕಮಿಷನ್ನಿನ ವರದಿ ಆಖೈರು ತೀರ್ಪಲ್ಲ ಎಂದು ಹೇಳಿದ್ದಾರೆ.

ಮಹಾಜನ್ ಕಮೀಷನ್ ರಿಪೋರ್ಟನ್ನು ಶ್ರೀ ಚವಾಣ್ ಅವರು ಬದಿಗೊತ್ತಿ, ರಾಷ್ಟ್ರದ ರಾಜಕೀಯ ಮುಖಂಡರೊಡನೆ ಮಾತನಾಡಿ ನಂತರ ನಿರ್ಣಯಕ್ಕೆ ಬರೋಣ ಎಂದು ಈಗ ಹೇಳುತ್ತಿದ್ದಾರೆ. ಮೈಸೂರು ರಾಜ್ಯ ಅನೇಕ ಕನ್ನಡ ಭಾಗಗಳನ್ನು ಕಳೆದುಕೊಂಡಿದೆ. ಶ್ರೀ ಚವಾಣ್ ಅವರು ಯಾರೋ ಒಬ್ಬರ ಪ್ರಭಾವಕ್ಕೆ ಒಳಗಾಗಿ ಈ ರೀತಿಯ ಹೇಳಿಕೆ ಕೊಡುವುದು ಸರಿಯಲ್ಲ. ಏಕಸದಸ್ಯ ಆಯೋಗಕ್ಕೆ ಒಪ್ಪುವುದಿಲ್ಲವೆಂದು ಅನೇಕ ಸಾರಿ ಹೇಳುತ್ತಿದ್ದ ತಾವು ಕೊನೆಗೆ ಒಪ್ಪಿಕೊಂಡು ಬಂದಿರಿ. ಇವತ್ತಿನ ದಿವಸ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಕೇಂದ್ರದ ಗೃಹಮಂತ್ರಿಗಳಿಂದ ನನಗೆ ಅಧಿಕೃತವಾದ ವರದಿ ಬಂದಿಲ್ಲ, ಆದ್ದರಿಂದ ನನ್ನ ಅಭಿಪ್ರಾಯವನ್ನು ಈಗಲೇ ಏನೂ ಹೇಳುವುದಕ್ಕಾಗುವುದಿಲ್ಲವೆಂದು. ಏನು ವರದಿ ಬರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆಯೆಂದು ಅದೇ ಹಳೇ ಹಾಡನ್ನು ಹೇಳುತ್ತಿದ್ದಾರೆ. ಮಹಾರಾಷ್ಟ್ರದ ನಾಯಕರ ಒತ್ತಾಯಕ್ಕೆ ಮಣಿದು ಕೇಂದ್ರದ ನಾಯಕರುಗಳು ಏನು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ ಎಂಬುದನ್ನು ತಾವು ಇನ್ನೂ ಮನಗಂಡಿಲ್ಲ. ನಾನು ಕೇಳತಕ್ಕದ್ದು, ಶ್ರೀ ನಿಜಲಿಂಗಪ್ಪನವರು ಈ ರಾಜ್ಯಕ್ಕೆ ಒಂದು ಭರವಸೆ ಕೊಡಬೇಕಾಗಿದೆ, ಏನೆಂದರೆ ತಾವು ತಮ್ಮ ಮಾತಿನಲ್ಲಿ ದೃಢವಾದ ನಂಬಿಕೆ ಇದ್ದರೆ ಮಹಾಜನ್ ವರದಿಯನ್ನು ಕೇಂದ್ರ ಸರ್ಕಾರದವರು ಒಂದು ತೀರ್ಪು ಎಂದು ಒಪ್ಪದೆ ಹೋದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆಂದು. ಗಡಿ ವಿಚಾರದಲ್ಲಿ ತಾವು ನಾಟಕೀಯವಾಡುವುದು ಸರಿಯಲ್ಲ. ಇವತ್ತು ನಿಮಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನವೂ ಬೇಕು, ಮುಖ್ಯಮಂತ್ರಿ ಪದವಿಯೂ ಬೇಕು.

[MR. CHAIRMAN (SRI S. D. KOTHAVALE) in the Chair]

Sri RAMAKRISHMA HEGDE (Minister for Finance and Planning).—May I ask the same question to him ? Is he also prepared to resign from his party if the leader of his party in Parliament takes a different position ?

Sri H. SIDDAVEERAPPA.—May I further ask whether he can make a firm commitment first and then ask us ?

Sri RAMAKRISHNA HEGDE.—When he throws a challenge, whether he is prepared to do it himself ? Charity should begin at home.

Sri H. SIDDAVEERAPPA.—First accept the challenge.

ಶ್ರೀ ಎಸ್. ಶಿವಪ್ಪ.—ಮಹಾಜನ್ ಅವರು ತಮ್ಮ ವರದಿಯನ್ನು ಕೊಟ್ಟಮೇಲೆ ಅದನ್ನು ಒಪ್ಪುವಂತೆ ಕೇಂದ್ರ ಸರ್ಕಾರದವರನ್ನು ಕೇಳುವ ಜವಾಬ್ದಾರಿ ನಿಮ್ಮ ಮೇಲೆ ಬಿದ್ದಿದೆ. ಕೇಂದ್ರ ಸರ್ಕಾರದವರು ವರದಿ ಬಂದ ಮೇಲೆ ತಮ್ಮ ಮನಸ್ಸಿಗೆ ಬಂದಂತೆ ಬದಲಾವಣೆ ಮಾಡುತ್ತಾರೆಂದು ನಮಗೆ ಮೊದಲೇ ಗೊತ್ತಿತ್ತು. ಆದ್ದರಿಂದಲೇ ಏಕ ಸದಸ್ಯ ಆಯೋಗ ಬೇಡವೆಂದು ಪ್ರತಿಭಟನೆ ಮಾಡಿದೆವು. ಧೈರ್ಯವಿಲ್ಲದ ನಾಯಕರಿಂದ ಮಹಾಜನ್ ವರದಿಯನ್ನು ಕೇಂದ್ರದವರು ಒಪ್ಪುವಂತೆ ಮಾಡುವುದು ಸಾಧ್ಯವಿಲ್ಲವೆಂದು ನಾವು ಹೇಳುತ್ತಲೇ ಇದ್ದೇವೆ. ಈ ಬಗ್ಗೆ ಇದುವರೆಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ಎಂ. ಸಿದ್ದಯ್ಯ.—ನಾವೂ ಪ್ರತಿಭಟನೆ ಮಾಡಿದ್ದೇವೆ. ಸತ್ಯಾಗ್ರಹ ಮಾಡಿದ್ದೇವೆ ಮತ್ತು ಮಾಡುವುದನ್ನೆಲ್ಲ ಮಾಡುತ್ತಿದ್ದೇವೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ನೀವು ಮಾಡುತ್ತಿರುವುದರಲ್ಲಿ ಯಾವ ಅರ್ಥವೂ ಇಲ್ಲ.

Mr. CHAIRMAN.—I think talking across the table is not useful at all. It will divert the attention from the issues involved. I request the hon'ble Member Sri Sivappa to go ahead with his arguments and express his views.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈ ರಾಜ್ಯದಲ್ಲಿ ಆಗುತ್ತಿರುವ ನಡೆವಳಿಕೆಗಳನ್ನು ನೋಡಿದರೆ, ಅದು ಕೇವಲ ನಾಟಕೀಯವೆಂದು ಗೊತ್ತಾಗುತ್ತಿದೆ. ಆ ಬಗ್ಗೆ ನಾವು ಪ್ರತಿಭಟನೆ ಮಾಡಲೇ ಬೇಕಾಗಿದೆ. ಅಲ್ಲದೆ ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಸವಾಲ್ ಹಾಕುತ್ತಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅವರು ಬಾಯಿ ಬಿಡುವುದೇ ಇಲ್ಲ.

ಶ್ರೀ ಎಸ್. ಶಿವಪ್ಪ.—ಇವತ್ತು ಮಾನ್ಯ ಮುಖ್ಯಮಂತ್ರಿಗಳ ಒಂದು ಕಾಲು ಕಾಂಗ್ರೆಸ್ ಅಧ್ಯಕ್ಷಗಿರಿಯ ಮೇಲಿದೆ, ಮತ್ತೊಂದು ಕಾಲು ಮುಖ್ಯಮಂತ್ರಿಯ ಸ್ಥಾನದಲ್ಲಿದೆ. ಅವರು ತಮ್ಮ ಒಂದು ಅಭಿಪ್ರಾಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರೆ ಅದಕ್ಕೆ ಯಾವ ಬೆಲೆಯೂ ಸಿಗುವುದಿಲ್ಲ, ಕೊಡುವುದಕ್ಕೆ ಸಾಧ್ಯವೂ ಆಗುವುದಿಲ್ಲ. ಈ ದೇಶದ ಮುಖ್ಯಮಂತ್ರಿಗಳು ಯಾರೇ ಆಗಿರಲಿ, ಮುಖ್ಯಮಂತ್ರಿಯವರು ಮಾತ್ರ ಮಂಡನೆ ಮಾಡಬೇಕಾಗಿತ್ತು. ಕಾರ್ಯಕ್ರಮದ ಪಟ್ಟಿಯಲ್ಲಿ ಮೊದಲು ಶ್ರೀ ನಿಜಲಿಂಗಪ್ಪನವರ ಹೆಸರು ಇತ್ತು. ಏನು ಕಾರಣವೋ ಅಧಿಕೃತವಾಗಿ ಈ ಸಭೆಯ ಮುಂದೆ ಚರ್ಚೆಗೆ ಬಂದಾಗ ಹೆಸರು ಬದಲಾವಣೆಯಾಗಿತ್ತು. ಆಯೋಗದ ವರದಿಯನ್ನು ಒಪ್ಪಬೇಕೆಂದು ಸಭೆಯ ಮುಂದೆ ಮಂಡಿಸಲು ಸಹ ತಮಗೆ ಇಷ್ಟವಿಲ್ಲದಿದ್ದರೆ, ತಮ್ಮ ಒಂದು ಅಂಜುಬುರುಕುತನ ಅಲ್ಲಿಯೇ ಗೊತ್ತಾಗುತ್ತದೆ. ಈ ಗಡಿ ಬಗ್ಗೆ ಹಿಂದೆ ಪ್ರಶ್ನೆ ಮಾಡಿದ್ದೇವೆ, ಇಂದೂ ಸಹ ಮಾಡುತ್ತಿದ್ದೇವೆ, ಈ ಮಹಾಜನ್ ವರದಿಯನ್ನು ಒಪ್ಪುವಂತೆ ಕೇಂದ್ರ ಸರ್ಕಾರದವರನ್ನು ನೀವು ಒತ್ತಾಯ ಮಾಡದಿದ್ದರೆ, ಇನ್ನು ಯಾವುದೇ ವರದಿಯಿಂದಲೂ ಕನ್ನಡದ ಜನರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕಾಗುವುದಿಲ್ಲವೆಂದು ಸಾರಿ ಸಾರಿ ಹೇಳಬೇಕಾಗಿದೆ.

ಮಹಾಜನ್ ವರದಿ ಬರುವುದಕ್ಕೆ ಮುಂಚೆ ಮೈಸೂರು ರಾಜ್ಯದಲ್ಲಿ ಗಡಿ ಬಗ್ಗೆ ಯಾವ ಪರಿಸ್ಥಿತಿ ಇತ್ತು ಎಂಬುದನ್ನು ತಾವು ಯೋಚನೆ ಮಾಡಿ. ಎಸ್.ಆರ್.ಸಿ. ವರದಿ ಬಂದಾಗ ಕನ್ನಡದ ಅನೇಕ ಭಾಗಗಳು ಹೊರಗೇ ನಿಂತುಹೋದವು. ಕನ್ನಡ ಪ್ರಾಂತ್ಯಗಳು ನಮ್ಮ ರಾಜ್ಯದ ಹೊರಗಡೆ ಎಷ್ಟು ಕಡೆ ಇವೆ ಎಂಬ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳೂ ಸೇರಿ, ಕರ್ನಾಟಕ ಏಕೀಕರಣ ಸಮಿತಿ ಎಂದು ಮಾಡಿಕೊಂಡು ಒಂದು ಭೂಪಟವನ್ನು ತಯಾರು ಮಾಡಿದ್ದೇವೆ. ಅದರ ಬಗ್ಗೆ ಚರ್ಚೆಯನ್ನು ಸಹ ಮಾಡಿ ಒಂದು ವರದಿಯನ್ನು ತಯಾರು ಮಾಡಿದ್ದೇವೆ. ನಮ್ಮ ರಾಜ್ಯದ ಹೊರಗಡೆ ಇರುವ ಕನ್ನಡದ ಭಾಗಗಳನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲು ಪ್ರತಿಯೊಬ್ಬರೂ ಹೋರಾಟ ಮಾಡಲು ಸಿದ್ಧರಿರಬೇಕೆಂದು ನಾವು ಹೇಳುತ್ತಿದ್ದಾಗ, ಶ್ರೀ ನಿಜಲಿಂಗಪ್ಪನವರು ಕೇವಲ ಮೈಸೂರು ಮಹಾರಾಷ್ಟ್ರ ಮತ್ತು ಮೈಸೂರು-ಕೇರಳ ಗಡಿ ಬಗ್ಗೆ ಆಯೋಗ ರಚನೆ ಮಾಡಲು ಒಪ್ಪಿಕೊಂಡು ಬಂದರು. ಬೇರೆ ಭಾಗಗಳನ್ನು ಪಡೆದುಕೊಳ್ಳಲು ನೀವು ಇನ್ನು ಯಾವಾಗ ಪ್ರಯತ್ನ ಮಾಡುತ್ತೀರಿ ಎಂದು ಕೇಳಬೇಕಾಗಿದೆ. ಕನ್ನಡದ ಭಾಗಗಳು ಕೇವಲ ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಸೇರಿಲ್ಲ, ಆಂಧ್ರ ಪ್ರಾಂತ್ಯದಲ್ಲಿ ಮತ್ತು ಮದ್ರಾಸ್ ಪ್ರಾಂತ್ಯದಲ್ಲಿಯೂ ಸೇರಿವೆ. ತಾಳವಾಡಿ, ಪೆಕರ್ಾ, ಮಡಕಶಿರ, ಆಲೂರು ಮುಂತಾದ ಕನ್ನಡದ ಭಾಗಗಳು ನಮಗೆ ಬರಬೇಕಾಗಿದೆಯೆಂದು ಕಾತುರದಿಂದ ಹೇಳುತ್ತಿದ್ದೇವೆ. ಅಲ್ಲದೆ ಆ ಭಾಗದ ಜನರು ಸಹ ಈ ರಾಜ್ಯಕ್ಕೆ ಬರಬೇಕೆಂದು ಕಾತುರದಿಂದ ಎದುರು ನೋಡುತ್ತಿದ್ದಾರೆ. ಈ ಎಲ್ಲಾ ಭಾಗಗಳನ್ನು ಸೇರಿಸಿಕೊಳ್ಳಲು ತಾವು ಪ್ರಯತ್ನ ಮಾಡದೆ ಇವತ್ತಿನ ದಿವಸ ಕೇವಲ ಮಹಾರಾಷ್ಟ್ರ ಮತ್ತು ಕೇರಳ ಗಡಿ ಬಗ್ಗೆ ತೀರ್ಮಾನ ಮಾಡಿದರೆ ಸಾಕು ಎಂದು ಹೇಳುತ್ತಿದ್ದೀರಿ. ನಿಮಗೆ ಕನ್ನಡ ರಾಜ್ಯದ ಹೊರಗಿರುವ ಕನ್ನಡದ ಭಾಗಗಳ ಮೇಲೆ ಖಂಡಿತ ಮಮತೆ ಇದೆಯೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಮಹಾಜನ್ ವರದಿಯಲ್ಲಿ ಹೊರಗಿರುವ ಕನ್ನಡದ ಪ್ರದೇಶಗಳು ಕೆಲವನ್ನು ನಮ್ಮ ರಾಜ್ಯಕ್ಕೆ ಸೇರಿಸಿರುವ ಬಗ್ಗೆ ನೀವು ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೀರಿ. ಬೆಳಗಾಂ ನಮಗೇ ಉಳಿಯಿತು, ಕಾರವಾರ ನಮಗೇ ಉಳಿಯಿತು ಎಂದು ಹೇಳುತ್ತಿದ್ದೀರಿ ; ಆದರೆ ನಮ್ಮ ರಾಜ್ಯದಲ್ಲಿರುವ ನಿಪ್ಪಾಣಿ ಮತ್ತು ಖಾನಾಪುರ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಆ ವರದಿಯಲ್ಲಿರುವುದನ್ನು ತಾವು ಪ್ರತಿಭಟಿಸಿಲ್ಲ. ಈಗ ಮೈಸೂರು ರಾಜ್ಯದಲ್ಲಿರುವ ಒಂದು ಅಂಗುಲ ಭೂಮಿಯೂ ಸಹ ಬೇರೆ ರಾಜ್ಯಕ್ಕೆ ಸೇರಲು ಬಿಡುವುದಿಲ್ಲವೆಂದು ಹೇಳುವುದಕ್ಕೆ ನಿಮಗೆ ಧೈರ್ಯವಿಲ್ಲ. ಅಲ್ಲಿಯೇ ನಿಮ್ಮ ಅಂಜುಬುರುಕುತನ ಗೊತ್ತಾಗುತ್ತದೆ. ಬೆಳಗಾಂ ಮತ್ತು ಕಾರವಾರವನ್ನು ನಮ್ಮ ರಾಜ್ಯದಲ್ಲಿಯೇ ಉಳಿಸಿದರು ಎಂದು ತಾವು ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೀರಿ, ಆದರೆ ನಾನು ಹೇಳುತ್ತೇನೆ, ನೀವು ಸಂತೋಷವನ್ನು ವ್ಯಕ್ತಪಡಿಸಬೇಕಾಗಿಲ್ಲ, ಬೆಳಗಾಂ ಯಾವಾಗಲೂ ನಮ್ಮದೇ, ಶಾಶ್ವತವಾಗಿ ನಮ್ಮದೇ, ಯಾರೂ ನಮಗೆ ಉಳಿಸಿಕೊಟ್ಟಿಲ್ಲ. ಮಹಾರಾಷ್ಟ್ರದಿಂದ ಅನೇಕ ಭಾಗಗಳು ನಮ್ಮ ರಾಜ್ಯಕ್ಕೆ ಈ ವರದಿಯಿಂದ ಬಂದಿದೆಯೆಂದು ಹೇಳುತ್ತಿದ್ದೀರಿ, ಆದರೆ ಹೋದದ್ದು ಎಷ್ಟು ಎಂದು ಹೇಳುತ್ತಿಲ್ಲ. ಮಹಾಜನ್ ವರದಿಯಿಂದ ನಮ್ಮ ರಾಜ್ಯಕ್ಕೆ ಪ್ರಯೋಜನವಾಗಲೀ ಲಾಭವಾಗಲೀ ಏನೇನೂ ಕೂಡ ಆಗಿಲ್ಲವೆಂದು ಹೇಳುತ್ತೇನೆ.

[MR. DEPUTY SPEAKER in the Chair]

ಒಳ್ಳೆಯ ಫಲವತ್ತಾದ ಪ್ರದೇಶ ನಮ್ಮ ಕೈ ಬಿಟ್ಟು ಹೋಗಿದೆ. ಆದುದರಿಂದ ಮಹಾಜನ ಕಮಿಷನ್ ವರದಿಯ ಬಗ್ಗೆ ಸಂತೋಷಪಡುವುದು ಸರಿಯಲ್ಲ. ಮೈಸೂರು ರಾಜ್ಯಕ್ಕೆ ಇನ್ನೂ ಬರಬೇಕಾಗಿರುವ ಇತರ ಪ್ರದೇಶದ ಬಗ್ಗೆ ಜನ ನಮ್ಮನ್ನು ಕೇಳುತ್ತಿದ್ದಾರೆ. ಸೊಲ್ಲಾಪುರದ ಪ್ರತಿನಿಧಿಗಳು ನಮ್ಮ ಕಡೆಗೆ ಬಂದು ಹೇಳಿದ್ದೇನೆಂದರೆ, ಕಾಂಗ್ರೆಸ್ಸಿನವರು ನಮ್ಮ ಕೈ ಬಿಟ್ಟಿದ್ದಾರೆ ವಿರೋಧ ಪಕ್ಷದವರು ನಮಗೆ ಸಹಾಯ ಮಾಡಬೇಕು ಎಂದು ನಮ್ಮನ್ನು ಕೇಳಿದರು. ನಿಪ್ಪಾಣಿಯವರು ನಮ್ಮ ಕಡೆಗೆ ಬಂದು ಸಹಾಯ ಮಾಡಿ ಎಂದು ಕೇಳಿದರು. ಯಾಕೆಂದರೆ, ಸರಕಾರದವರು ನಿಪ್ಪಾಣಿ ಕೊಡುವುದಕ್ಕೆ ಒಪ್ಪಿಕೊಂಡು ಬಿಟ್ಟಿದ್ದಾರೆ. ಮಹಾಜನ್ ಕಮಿಷನ್ ರಿಪೋರ್ಟ್ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆ. ಆದರೆ ಈಗ ಈ ವರದಿ ಬಗ್ಗೆ ಶಾಸನ ಸಭೆಯಲ್ಲಿ ಚರ್ಚೆ ನಡೆದಿದೆ. ಕ್ಯಾಬಿನಟ್ ಡಿಸಿಷನ್ ಆಗಿ ಶಾಸನ ಸಭೆಯ ಅಭಿಪ್ರಾಯ ಕೇಳುವುದಕ್ಕೆ ಬಂದಿದ್ದಾರಲ್ಲವೇ ? ಇಂಥ ಒಂದು ತೀರ್ಮಾನ ತೆಗೆದುಕೊಳ್ಳಲು ಮೊದಲು ಇಂಥ ವಿಷಯ ಶಾಸನ ಸಭೆಯ ಮುಂದೆ ಇಟ್ಟು, ಚರ್ಚೆ ನಡೆಸಿ, ಸಭೆಯ ಅಭಿಪ್ರಾಯ ಪಡೆದು ಆಮೇಲೆ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡರೆ ಅದಕ್ಕೆ ಒಂದು ಅರ್ಥ ಇದೆ, ಅದಕ್ಕೆ ಒಂದು ಬೆಲೆ ಇದೆ. ವೈಯಕ್ತಿಕ ಅಭಿಪ್ರಾಯ ಮಾನ್ಯ ಸಚಿವರು ಈ ವರದಿ ಮೇಲೆ ಹೇಳುವುದು ಅಲ್ಲ. ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡರು. ಪ್ರಜಾ ಪ್ರಭುತ್ವವನ್ನು ಅವಹೇಳನ ಮಾಡತಕ್ಕಂಥ ಮಾದರಿ ಇದು. ಶ್ರೀಮಾನ್ ನಿಜಲಿಂಗಪ್ಪನವರು ತೀರ್ಮಾನ ಮಾಡಿದರು ಎಂದು ಅನ್ನೋಣವೇ ? ಇವರು ಎಂ.ಪಿ.ಸಿ.ಸಿ. ಅಭಿಪ್ರಾಯ ತೆಗೆದುಕೊಂಡರು. ಎಂ.ಪಿ.ಸಿ.ಸಿ. ಅಭಿಪ್ರಾಯದ ಮೇಲೆ ಕಾಬಿನೆಟ್ ತೀರ್ಮಾನ ತೆಗೆದುಕೊಂಡಿದೆ ಎಂದು ಹೇಳುತ್ತಾರೆ. ಎಂ.ಪಿ.ಸಿ.ಸಿ. ಹೇಳಿದ ಹಾಗೆ ಸರಕಾರ ಕೆಲಸ ಮಾಡುತ್ತದೆಯೇ ? ರಾಜ್ಯದ ಎರಡು ಕೋಟಿ ಜನರ ಪ್ರತಿನಿಧಿಗಳ ಅಭಿಪ್ರಾಯ ತೆಗೆದುಕೊಳ್ಳಬೇಡವೇ ? ಕಾಂಗ್ರೆಸ್ ಪಾರ್ಟಿಯಲ್ಲಿ ತೀರ್ಮಾನವಾಗಿದೆ ಎಂದು ಸರಕಾರದವರು ಕ್ಯಾಬಿನೆಟ್ ತೀರ್ಮಾನ ಮಾಡಿ ಮಾಹಾಜನ ಕಮಿಷನ್ ರಿಪೋರ್ಟ್ ಒಪ್ಪಿಕೊಂಡುಬಿಟ್ಟಿದ್ದಾರೆ. ಈ ವರದಿಯ ಮೇಲೆ ಚರ್ಚೆ ಮಾಡಿ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಶಾಸನ ಸಭೆಯನ್ನು ನಾಮಕಾವಾಸ್ತೆ ಕರೆದಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ (ಪಶುಪಾಲನೆ, ಮೀನುಗಾರಿಕೆ, ವಾರ್ತೆ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು).—ಅದಕ್ಕೆ ಕಾರಣ ಇದೆ. ಮಹಾಜನ್ ಸಮಿತಿ ಮಾಡಬೇಕು ಎಂದು ಒಪ್ಪಿಕೊಂಡ ಮೇಲೆ ಆ ಸಮಿತಿಯಿಂದ ಬರತಕ್ಕಂಥ ವರದಿ ಒಪ್ಪಬೇಕು ಎಂಬುದು ಅದರಲ್ಲಿ ಅಡಕವಾಗಿದೆ.

ಶ್ರೀ ಎಸ್. ಶಿವಪ್ಪ.—ಇವರು ತರ್ಕ ಮಾಡಿ ಹೇಳುತ್ತಾರೆ. ಒಪ್ಪಬೇಕು ಎಂದು ನಿಮಗೆ ಬ್ಲಾಂಕ್ ಚೆಕ್ ಯಾರು ಕೊಟ್ಟಿದ್ದರು ?

ಶ್ರೀ ಡಿ. ದೇವರಾಜ ಅರಸ್.—ಒಪ್ಪಿದ್ದು ಸರಿಯಲ್ಲ ಎಂದು ಆಗಲೇ ಹೇಳಬೇಕಾಗಿತ್ತು. ಒಂದುಗೂಡಿದ ಕರ್ನಾಟಕ ಬೇಡ ಎಂದು ಹೇಳಿದವರು ನಿಮ್ಮಲ್ಲಿ ಬೇಕಾದಷ್ಟು ಜನರು ಇದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಎಂ.ಪಿ.ಸಿ.ಸಿ. ನಿರ್ಣಯದಲ್ಲಿ ಮಹಾಜನ್ ಕಮಿಷನ್ ರಿಪೋರ್ಟ್ ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕೆಂದು ನಿರ್ಣಯ ಮಾಡಿದರೂ ಕೂಡ, ಅದರಲ್ಲಿ ಹೇಳಿದ ಹಾಗೆ ಇನ್ನೂ ಅನೇಕ ಭಾಗ ಬಿಟ್ಟು ಹೋಗಿದೆ, ಅದು ಮೈಸೂರಿಗೆ ಬರಬೇಕು, ಮೈಸೂರಿಗೆ ಅನ್ಯಾಯವಾಗಿದೆ ಎಂದು ಹೇಳಿ ವರದಿ ಒಪ್ಪಬೇಕು ಎಂದು ನಿರ್ಣಯ ಮಾಡಿದೆ.

ಶ್ರೀ ಮಹದೇವ್ ಜಿ. ಬಣಕಾರ್ (ಬ್ಯಾಡಗಿ).—ಎಂ.ಪಿ.ಸಿ.ಸಿ. ನಿರ್ಣಯದ ಪ್ರಕಾರ ಕ್ಯಾಬಿನೆಟ್ ತೀರ್ಮಾನ ತೆಗೆದು ಕೊಂಡರೇ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಪ್ರಜಾಪ್ರಭುತ್ವದಲ್ಲಿ ಪಾರ್ಟಿ ಸರಕಾರ ನಡೆಯುವುದು ಹಾಗೆಯೇ ಇರುತ್ತದೆ.

ಶ್ರೀ ಮಾಹಾದೇವ್ ಜಿ. ಬಣಕಾರ.—ಎಂ.ಪಿ.ಸಿ.ಸಿ. ತೀರ್ಮಾನದ ಪ್ರಕಾರ ಕ್ಯಾಬಿನೆಟ್ ಒಪ್ಪಬೇಕು ಎಂದು ನಿರ್ಣಯ ತೆಗೆದುಕೊಂಡುದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—ವಿರೋಧ ಪಕ್ಷದವರನ್ನು ಸಹ ಕನ್‌ಸಲ್ಟ್ ಮಾಡಿ ಸರಕಾರ ನಿರ್ಣಯ ತೆಗೆದುಕೊಂಡದ್ದು.

ಶ್ರೀ ಎಸ್. ಚೆನ್ನಯ್ಯ.—ಯಾವ ಯಾವ ವಿರೋಧ ಪಕ್ಷದವರನ್ನು ಕೇಳಿದ್ದು ? ಅದರಲ್ಲಿ ಯಾರು ಯಾರು ಇದ್ದರು ? ಯಾರನ್ನು ಯಾವಾಗ ಕೇಳಿದ್ದಾರೆ ?

ಶ್ರೀ ಎಸ್. ಶಿವಪ್ಪ.—ವಿರೋಧ ಪಕ್ಷದವರ ಜೊತೆಗೆ ಚರ್ಚೆ ಮಾಡಿ ಕ್ಯಾಬಿನೆಟ್ ಡಿಸಿಷನ್ ಮಾಡಿರುವುದು ಎಂದು ಹೇಳುವುದು ಇದು ಸತ್ಯಕ್ಕೆ ದೂರವಾದುದು. ಯಾರನ್ನೂ ಕೇಳಲಿಲ್ಲ. ಇದು ಏಕಾಏಕೀ ತೀರ್ಮಾನ ತೆಗೆದುಕೊಂಡದ್ದು ಎಂದು ಹೇಳುತ್ತೇನೆ. ಎಂ.ಪಿ.ಸಿ.ಸಿ. ಯು ಆ ರೀತಿ ಹಾಗೆ ನಿರ್ಣಯ ಮಾಡಿದ್ದು ಎಂದು ಶ್ರೀ ಸಿದ್ದಯ್ಯನವರು ಹೇಳಿದರು. ಪಕ್ಷದ ಒಳಗಡೆ ತೀರ್ಮಾನವಾಗಿದೆ ಎನ್ನುವುದನ್ನು ನಾನು ಹೇಳುವುದಿಲ್ಲ. ಅದು ನಿಮ್ಮ ಪಕ್ಷದ ಅಭಿಪ್ರಾಯ. ಅದಕ್ಕೆ ನನ್ನ ಸಂಬಂಧ ಇಲ್ಲ. ನಾನು ಪ್ರಶ್ನೆ ಮಾಡತಕ್ಕಂಥಾದ್ದು ಕ್ಯಾಬಿನೆಟ್ ಡಿಸಿಷ್‌ನ್ ಬಗ್ಗೆ. ಈ ವರದಿ ಶಾಸನ ಸಭೆಯಲ್ಲಿ ಚರ್ಚೆಯಾಗುವ್ರದಕ್ಕೆ ಮುಂಚೆ, ಈ ಸಭೆಯಲ್ಲಿ ತೀರ್ಮಾನವಾಗುವುದಕ್ಕೆ ಮುಂಚೆ ಕ್ಯಾಬಿನೆಟ್ ಡಿಸಿಷನ್ ಮಾಡಿದರು ಎನ್ನುವುದನ್ನು ನಾನು ಕೇಳುತ್ತೇನೆ. ಈ ರೀತಿ ಸರಕಾರ ಮಾಡಿರುವುದು ಕೆಟ್ಟ ಪದ್ಧತಿಯಾಗಿದೆ. ಇದನ್ನು ಈ ಶಾಸನ ಸಭೆಯ ವೇದಿಕೆಯಿಂದ ನಾನು ಹೇಳಬೇಕಾಗಿದೆ. ಈ ಮಾಹಾಜನ್ ಕಮಿಷನ್ ವರದಿಯನ್ನು ನೀವೇ ನೀವಾಗಿ ಒಪ್ಪಿ ತಂದಿದ್ದೀರಿ. ಇದರಿಂದ ನಮ್ಮ ದೇಶದ ಮೇಲೆ ಏನು ಪರಿಣಾಮವಾಗಿದೆ ಅದನ್ನು ಹೇಳಬೇಕಾಗಿದೆ. ಯಾವಾಗ ಮಹಾಜನ್ ಕಮಿಷನ್ ನೇಮಕವಾಯಿತೋ ಆಗ್ಗೆ ಅವರನ್ನು ಒತ್ತಾಯಪೂರ್ವಕವಾಗಿ ಅವರ ಒಪ್ಪಿಗೆ ಪಡೆದ ಫಲವಾಗಿ ಸಮಿತಿಯ ರಿಪೋರ್ಟ್ ಏನೇ ಬರಲಿ ಅದನ್ನು ಒಪ್ಪಿಕೊಳ್ಳಬೇಕು ಎಂದು ಶ್ರೀಮಾನ್ ನಿಜಲಿಂಗಪ್ಪನವರು ಹೇಳುತ್ತಾ ಬಂದರು. ಈ ರಿಪೋರ್ಟ್ ಹೊರಗೆ ಬಂದ ಮೇಲೆ ಇದು ಒಂದು ಅವಾರ್ಡ್ ಇದು ಒಂದು ತೀರ್ಪು ಎಂದು ಪರಿಗಣಿಸಬೇಕು ಎಂದು ಅವರು ಹೇಳಿದ್ದಾರೆ. ಇಂದಿನ ಬೆಳಗಿನ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಕೇಂದ್ರ ಸರಕಾರದ ಗೃಹ ಸಚಿವರಾದ ಚವಾಣ ಅವರು ಹೇಳಿದ್ದು ಏನೆಂದರೆ, ಮಹಾಜನ್ ಕಮಿಷನ್ ರಿಪೋರ್ಟು ಇದು ತೀರ್ಮಾನವಲ್ಲ, ರಾಷ್ಟ್ರೀಯ ಒಟ್ಟು ಅಭಿಪ್ರಾಯ ಶೇಖರಣೆ ಮಾಡಿ ಮುಂದೆ ಏನು ಮಾಡಬೇಕು ಎಂಬುದನ್ನು ಅವರು ಯೋಚನೆ ಮಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಪಾರ್ಲಿಮೆಂಟಿನಲ್ಲಿ ಶುಕ್ಲ ಅವರು ಸರಕಾರದ ಅಭಿಪ್ರಾಯ ಏನು ಎಂದು ಕೇಳಿದ್ದಕ್ಕೆ ಸಚಿವರು ಉತ್ತರ ಕೊಟ್ಟಿದ್ದಾರೆ. ಮಹಾಜನ್ ಕಮಿಷನ್ ರಿಪೋರ್ಟ್ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಸೂದೆ ತರುವುದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಿರ್ದಿಷ್ಟವಾದ ಪ್ರಶ್ನೆ ಕೇಳಿದಾಗ್ಗೆ ಅಷ್ಟೇ ನಿರ್ದಿಷ್ಟವಾಗಿ ಅವರು ಹೇಳಿದ್ದಾರೆ. ರಾಷ್ಟ್ರೀಯ ಒಟ್ಟು ಅಭಿಪ್ರಾಯ ತೆಗೆದುಕೊಳ್ಳಬೇಕು ಎಂಬುದನ್ನು ಕೇಂದ್ರ ಸರಕಾರದ ವತಿಯಿಂದ ಕೇಂದ್ರ ಸರಕಾರದ ಪರವಾಗಿ ಗೃಹ ಸಚಿವರು ಲೋಕ ಸಭೆಯಲ್ಲಿ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಅಂದ ಮೇಲೆ ಅದು ಕೇಂದ್ರ ಸರಕಾರದ ಅಭಿಪ್ರಾಯ. ಪಾರ್ಲಿಮೆಂಟಿನ ಪದ್ಧತಿಯ ಅನುಭವವಿದ್ದವರು ಹೇಳುತ್ತಾರೆ : ಲೋಕ ಸಭೆಯಲ್ಲಿ ಮಂತ್ರಿಗಳುಹೇಳುವ ಅಭಿಪ್ರಾಯದಂತೆ ತೀರ್ಮಾನವಾಗುತ್ತದೆ ಎಂದು. ಈ ಅಭಿಪ್ರಾಯ ದೇಶದ ಮುಂದೆ ಬಂದ ಮೇಲೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದಕ್ಕೂ ಅದಕ್ಕೂ ಅಜಗಜಾಂತರ ಇದೆ. ಕೇಂದ್ರ ಸರಕಾರದ ಅಭಿಪ್ರಾಯ ಬಂದ ಮೇಲೆ ಮಹಾಜನ್ ಸಮಿತಿ ವರದಿ ಮೇಲೆ ಚರ್ಚೆ. ಮಾಡುವುದರಿಂದ ಪ್ರಯೋಜನವಾಗುತ್ತಿದೆ ಎಂದು ಈ ಸಭೆಯಲ್ಲಿ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಇದರಿಂದ ಏನು ಫಲ ಇದೆ ? ಕೇಂದ್ರ ಸರ್ಕಾರದ ಗೃಹ ಸಚಿವರು ಇದರ ಮೇಲೆ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅವರು ಮಹಾಜನ್ ಕಮಿಷನ್ ರಿಪೋರ್ಟನ್ನು ಕಸದ ಬುಟ್ಟಿಗೆ ಹಾಕುತ್ತಾರೆ. ಒಬ್ಬ ಶ್ರೇಷ್ಠ ನ್ಯಾಯಾಧೀಶರ ವರದಿ ಬಗ್ಗೆ ಇಷ್ಟು ಲಘುವಾಗಿ ಮಾಡುವುದಾದರೆ ಇನ್ನು ಮುಂದೆ ಇಂಥ ವರದಿ ಬರೆಯುವುದಕ್ಕೆ ಆತ್ಮ ಗೌರವ ಇರತಕ್ಕಂಥ ನ್ಯಾಯಾಧೀಶರು ಒಪ್ಪಿಕೊಳ್ಳುತ್ತಾರೆಯೇ ?

11-00 A.M.

ಈ ವರದಿಯನ್ನು ಕೇಂದ್ರದವರು ಕಸದ ಬುಟ್ಟಿಗೆ ಹಾಕಿದ್ದಾರೆ, ಕಸದ ಬುಟ್ಟಿಗೆ ಹೋಯಿತು ಎಂದು ಹೇಳಿದ್ದಾರೆ. ಆದರೂ ನಮ್ಮ ಮುಖ್ಯಮಂತ್ರಿಗಳು ಅದನ್ನು ಇನ್ನೂ ಹಿಡಿದುಕೊಂಡು ಕುಳಿತಿದ್ದಾರೆ. ಈ ವರದಿಯನ್ನು ಚವಾಣ್ ಅವರು ಬಿಸಾಡಿದ್ದಾರೆ, ಶ್ರೀ ಶುಕ್ಲ ಅವರು ಬಿಸಾಡಿದ್ದಾರೆ. ಕಸದ ಬುಟ್ಟಿಗೆ ಹೋಗಿರತಕ್ಕ ವರದಿಯನ್ನು ಚರ್ಚೆಮಾಡಿ ಒಂದು ಅಭಿಪ್ರಾಯವನ್ನು ಕೊಡಿ ಎಂದು ಇವರು ನಮ್ಮನ್ನು ಕೇಳುತ್ತಿದ್ದಾರೆ. ಇದರ ಔಚಿತ್ಯವೇನು ಎಂದು ನಾನು ತಮ್ಮನ್ನು ಪ್ರಾರ್ಥನೆ ಮಾಡುತ್ತಿದ್ದೇನೆ. ತಾವು ದಯವಿಟ್ಟು ಸರ್ಕಾರವನ್ನು ಕೇಳಬೇಕು, ಈ ವರದಿಗೆ ಜೀವವಿದೆಯೋ, ಈ ವರದಿ ಬದುಕಿದೆಯೇ ಎಂದು. ಈ ವರದಿಗೆ ಜೀವವಿಲ್ಲ, ಈ ವರದಿಯನ್ನು ಅವರು ಬಿಸಾಡಿದ್ದಾರೆ ಎಂದು ನಾನು ಹೇಳುತ್ತೇನೆ. ಇದು ಬರೀ ಕಾಗದದ ಪುಸ್ತಕವಾಗಿದೆ, ಇದರ ಜೀವಕಳೆಯನ್ನು ಲೋಕಸಭೆಯಲ್ಲಿ ಮಾಡಿರುವ ಹೇಳಿಕೆಯಿಂದ ತೆಗೆದುಹಾಕಿದ್ದಾರೆ. ಈಗ ಇದು ಒಂದು ರೀತಿಯಲ್ಲಿ ಕಸದಬುಟ್ಟಿಗೆ ಬಿಸಾಡುವಂಥ ಪುಸ್ತಕದ ರೂಪದಲ್ಲಿದೆ. ಇಂಥ ವರದಿಯ ಮೇಲೆ ಇಲ್ಲಿ ಚರ್ಚೆಯನ್ನು ಮುಂದುವರಿಸುವುದಕ್ಕಿಂತ ಮುಂಚೆ, ಇಲ್ಲಿ ಮಾಡುವ ಚರ್ಚೆಯಿಂದ ನಮಗೆ ಸಾಕಷ್ಟು ಪ್ರತಿಫಲ ದೊರಕುತ್ತ

ದೆಯೇ, ಎನ್ನುವುದನ್ನು ತಿಳಿಯುವುದು ಆವಶ್ಯಕ. ಇದರಿಂದ ಏನಾದರೂ ಅನುಕೂಲವಾಗುತ್ತದೆ ಎಂದು ಇದ್ದ ಪಕ್ಷದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರಾಗಲೀ, ಸರ್ಕಾರದ ವತಿಯಿಂದ ಯಾರೇ ಆಗಲೀ ಇವತ್ತು ಆ ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವತ್ತು ಕೇಂದ್ರದವರು ಏನೇ ಹೇಳಲಿ ಅದು ಕೇಂದ್ರ ಸರ್ಕಾರದ ಅಭಿಪ್ರಾಯವಲ್ಲ ಎನ್ನುವ ಮಾತನ್ನು ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದರು. ಅದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಮಾತ್ರಕ್ಕೆ ಅದು ಹಾಗಾಗುವುದಿಲ್ಲ. ಲೋಕಸಭೆಯಲ್ಲಿ ಗೃಹಸಚಿವರು, ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಹೇಳಿದ ಮೇಲೆ ಅದು ಕೇಂದ್ರ ಸರ್ಕಾರದ ಅಭಿಪ್ರಾಯವಲ್ಲ ಎಂದರೆ ಅಂಥದನ್ನು ಬೀದಿಯಲ್ಲಿ ಹೋಗುವ ಜನಗಳಿಗೆ ಹೇಳಿದರೆ ಅವರು ಒಪ್ಪಬಹುದು. ಶ್ರೀಮಾನ್ ವೀರೇಂದ್ರ ಪಾಟೀಲರಾಗಲೀ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರಾಗಲೀ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ಅದು ಸರ್ಕಾರದ ಅಭಿಪ್ರಾಯವಲ್ಲ ಎಂದರೆ ಎಷ್ಟೊಂದು ಅಪಹಾಸ್ಯವಾಗುತ್ತದೆ? ಹೀಗಿರುವಾಗ ಕೇಂದ್ರ ಸರ್ಕಾರದ ಮಂತ್ರಿಗಳಾದ ಚವಾಣ್ ಮತ್ತು ಶುಕ್ಲ ಅವರು ಹೇಳಿಕೆ ಕೊಟ್ಟಿರುವುದು ಕೇಂದ್ರ ಸರ್ಕಾರದ ಅಭಿಪ್ರಾಯವಲ್ಲ ಎಂದು ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದರೆ ಅವರು ಇನ್ನೂ ಕೂಡ ಯಾವ ಭ್ರಮೆಯಲ್ಲಿದ್ದಾರೆ ಎಂದು ಗೊತ್ತಾಗುತ್ತದೆ. ಅವರು ಈ ಭ್ರಮೆಯನ್ನು ಬಿಟ್ಟು, ಕೇಂದ್ರ ಮಂತ್ರಿಗಳ ಹೇಳಿಕೆಯ ನಿಜವಾದ ಅರ್ಥವೇನು, ಬಣ್ಣವೇನು ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವತ್ತು ಕೇಂದ್ರದವರು ಈ ವರದಿಯನ್ನು ಕಸದಬುಟ್ಟಿಗೆ ಬಿಸಾಡಿದ್ದಾರೆಂದರೆ, ಇದಕ್ಕೆ ಎಷ್ಟೊಂದು ಬೆಲೆ ಬರುತ್ತದೆ ಎಂದು ಅರ್ಥಮಾಡಿಕೊಳ್ಳಿ. ಆದ್ದರಿಂದ ಕೇಂದ್ರ ಸರ್ಕಾರದ ಮಂತ್ರಿಗಳು ಮಾಡಿರುವ ಹೇಳಿಕೆಗಳ ಅರ್ಥವೇನು ಎನ್ನುವುದನ್ನು ಈ ಸಭೆಗೆ ತಿಳಿಸಬೇಕು ಎಂದು ಸಭಾಪತಿಯವರ ಮೂಲಕ ಮುಖ್ಯಮಂತ್ರಿಯವರನ್ನು ಮತ್ತು ಇತರ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಕೇಂದ್ರ ಸರ್ಕಾರದವರ ನಿಲುವು ಏನು ಎನ್ನುವುದನ್ನು ಸಭೆಗೆ ಹೇಳಿದ ಹೊರತು ಈ ವರದಿಯ ಮೇಲೆ ಏನು ಚರ್ಚೆ ಮಾಡಿದರೂ ಅದರಿಂದ ಫಲವಿಲ್ಲ. ಕಾಲ ವ್ಯರ್ಥವಾಗುತ್ತದೆ. ಇಂಥ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಖಂಡಿತವಾಗಿಯೂ ನಮಗೆ ಮನಸ್ಸಿಲ್ಲ. ಈ ಚರ್ಚೆಯಲ್ಲಿ ಏನೂ ಅರ್ಥವಿಲ್ಲ ಎಂದು ಕೂಡ ಹೇಳುತ್ತೇನೆ.

ನಿಮ್ಮ ಮಾತಿಗೆ ಕೇಂದ್ರ ಸರ್ಕಾರದವರು ಬಗ್ಗುತ್ತಾರೆಯೇ? ಮೊದಲಿನಿಂದ ಕೊನೆಯವರೆಗೂ ಅವರು ಹೇಗೆ ಹೇಳಿದರೆ ಹಾಗೆ ತಲೆಬಾಗಿ ಬಂದಿರುವ ನಿಮಗೆ ಈ ವಿಚಾರದಲ್ಲಿ ಅವರಿಗೆ ಸ್ಪಷ್ಟವಾಗಿ ಹೇಳುವ ಎದೆಗಾರಿಕೆಯಾದರೂ ಇದೆಯೇ, ಈ ವಿಚಾರದಲ್ಲಿ ನೀವು ಜಯಿಸುವುದಕ್ಕೆ ಸಾಧ್ಯವಿದೆಯೇ? ಹಿಂದಿನ ಸನ್ನಿವೇಶಗಳನ್ನು ನೆನಪಿಗೆ ತೆಗೆದುಕೊಳ್ಳುವುದಾದರೆ ನಿಮ್ಮಿಂದ ಇದು ಸಾಧ್ಯವಿಲ್ಲ. ಅವರು ಏನು ಹೇಳಿದರೆ ಅದಕ್ಕೆ ತಲೆಬಾಗುವವರು ನೀವು ಎನ್ನುವುದು ನಮಗೆ ಗೊತ್ತಾಗಿದೆ. ಪಾರ್ಲಿಮೆಂಟಿನಲ್ಲಿ ಕೇಂದ್ರದ ಗೃಹ ಸಚಿವರು ಹೇಳಿಕೆ ಕೊಟ್ಟ ಮೇಲೆ ಅದರ ಬಗ್ಗೆ ಏನೂ ತಿಳಿದುಕೊಳ್ಳದೆ ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ದೇಶದ ಜನರನ್ನು ಒಪ್ಪಿಸುವುದಕ್ಕೆ ಮತ್ತು ಮಹಾಜನ್ ವರದಿಯ ಪ್ರಕಾರವಾಗಿ ಕನ್ನಡ ದೇಶದ ಜನತೆಗೆ ಏನು ಅನುಕೂಲವಾಗಿದೆ ಅಥವಾ ಇಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಈ ವರದಿಯನ್ನು ಮಂಡಿಸಲಾಗಿದೆ ಅದು ಒಂದೇ ಒಂದು ಕೆಲಸ ಎಂದು ಭಾವನೆ ಮಾಡಿದ್ದಾರೆ ಎಂದು ಕಾಣುತ್ತದೆ. ನೀವು ದೇಶಕ್ಕೆ ಈ ವಿಚಾರದಲ್ಲಿ ದೊಡ್ಡ ಅಪಕಾರ ಮಾಡಿದ್ದೀರಿ, ಅನರ್ಥ ಮಾಡಿದ್ದೀರಿ. ನಮ್ಮ ದೇಶಕ್ಕೆ ಬರಬೇಕಾದ ಕನ್ನಡ ಭಾಗಗಳನ್ನು ತೆಗೆದುಕೊಳ್ಳತಕ್ಕ ಸಾಮರ್ಥ್ಯ ನಿಮ್ಮಲ್ಲಿಲ್ಲ ಎಂದು ಇವರಿಗೆ ಹೇಳಬೇಕಾಗಿದೆ. ಕೇವಲ ಜನರ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ, ಚವಾಣರು ಮತ್ತು ಶ್ರೀ ನಿಜಲಿಂಗಪ್ಪನವರು ಇಬ್ಬರೂ ಬಹುಶಃ ಮಾತನಾಡಿಕೊಂಡು ನೀವು ಹಾಗೆ ಹೇಳಿ, ನಾನು ಹೀಗೆ ಹೇಳುತ್ತೇನೆ, ಗಲಭೆ ಮುಂದುವರಿಯಲಿ, ಜನಗಳ ಗಮನ ಬೇರೆ ಕಡೆ ಕೇಂದ್ರೀಕೃತವಾಗಲಿ, ದೇಶದಲ್ಲಿನ ಆಹಾರ ಸಮಸ್ಯೆ ಪರಿಹಾರ ಮಾಡುವುದು ಸಾಧ್ಯವಿಲ್ಲ, ಜನ ಅರಹೊಟ್ಟೆ ತಿಂದು ಸಾಯುತ್ತಿರುವ ಪರಿಸ್ಥಿತಿಯಲ್ಲಿ ಅದನ್ನು ತಪ್ಪಿಸಿ ಅವರಿಗೆ ಆಹಾರವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಮುಂತಾಗಿ ಯೋಚಿಸಿ ಇಂಥ ಸಮಸ್ಯೆಗಳನ್ನು ಮುಂದೊಡ್ಡುತ್ತಿರುವ ಹಾಗೆ ಕಾಣುತ್ತದೆ. ನಿಜವಾಗಿ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕು, ಇದಕ್ಕೆ ತೀರ್ಮಾನ ಕೊಡಬೇಕು ಎಂದು ಬಲವಾದ ನಂಬಿಕೆ ಇದ್ದ ಪಕ್ಷದಲ್ಲಿ, ಈ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು ಎನ್ನತಕ್ಕ ದೃಢವಾದ ನಂಬಿಕೆ ನಿಮಗೆ ಇದ್ದ ಪಕ್ಷದಲ್ಲಿ, ಶಾಸ್ತ್ರೀಯವಾದ ರೀತಿಯಲ್ಲಿ, ರಾಷ್ಟ್ರದ ಮಟ್ಟದಲ್ಲಿ, ಎಲ್ಲ ದೇಶಗಳಿಗೂ ಇರತಕ್ಕ ಗಡಿ ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಎನ್ನುವ ಉದ್ದೇಶವಿದ್ದ ಪಕ್ಷದಲ್ಲಿ ಸ್ಟೇಟ್ಸ್ ರೀ ಆರ್ಗನೈಜೇಷನ್ ರಿಪೋರ್ಟ್ ಬಂದ ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು. ರಾಜ್ಯಗಳ ಪುನರ್ವಿಂಗಡಣೆಯಾಗಿ ಇಷ್ಟು ವರ್ಷವಾದರೂ ಕೂಡ ಈ ವಿಷಯವನ್ನು ಮುಂದೂಡಿಕೊಂಡು ಬಂದಿದ್ದಾರೆ. ಭಾಷಾ ವ್ಯಾಮೋಹ ಎಲ್ಲಿಯವರೆಗೆ ಬಂದಿದೆ ಎಂದರೆ ಮಹಾರಾಷ್ಟ್ರ-ಮೈಸೂರು ಗಡಿ ಪ್ರಶ್ನೆ ಮಾತ್ರವಲ್ಲ ದೇಶದಲ್ಲಿ ಭಾಷಾ ದ್ವೇಷವನ್ನು ಬೆಳೆಸುವುದಕ್ಕೆ ಕಾರಣರಾಗಿದ್ದಾರೆ. ಉತ್ತರ ಭಾರತ

(ಶ್ರೀ ಎಸ್. ಶಿವಪ್ಪ)

ದವರು ದಕ್ಷಿಣ ಭಾರತದವರನ್ನು ಬಯ್ದಿದ್ದಾರೆ ; ದಕ್ಷಿಣದವರು ಹೊಟ್ಟೆಗಿಲ್ಲದೆ ಉತ್ತರಕ್ಕೆ ಬಂದಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಮಹಾರಾಷ್ಟ್ರ—ಮೈಸೂರು ಗಡಿ ವಿವಾದವಾಯಿತು, ಈಗ ಹಿಂದಿ ಮತ್ತು ಹಿಂದಿಯೇತರ ಪ್ರಶ್ನೆ ಉದ್ಭವವಾಗಿದೆ. ಇದು ಎಲ್ಲಿಗೆ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಸಮಸ್ಯೆಗಳನ್ನೆಲ್ಲ ತಂದುಹಾಕಿ ಜನ ಜನಗಳಿಗೆ, ರಾಜ್ಯ ರಾಜ್ಯಗಳಿಗೆ ಜಗಳವನ್ನು ತಂದು ಒಬ್ಬರಿಗೊಬ್ಬರು ಕಾದಾಡುವಂತೆ ಮಾಡುತ್ತಿದ್ದೀರಿ. ಇದು ಸರಿಯಲ್ಲ. ನಮ್ಮ ಮುಂದಿರುವ ಸಮಸ್ಯೆಯನ್ನು ಬೇಗ ಪರಿಹರಿಸಬೇಕಾಗಿದೆ.

ನಾನು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇನೆ, ಈಚೆಗೆ ಗೃಹ ಸಚಿವರು ಏನು ಹೇಳಿದ್ದಾರೆ, ಏನೊಂದು ಅಭಿಪ್ರಾಯ ವ್ಯಕ್ತಮಾಡಿದ್ದಾರೆ, ಅದರ ನಿಜವಾದ ಪ್ರತಿಕ್ರಿಯೆ ಏನು, ಅವರು ಯಾವ ರೀತಿಯಲ್ಲಿ ಮುಂದುವರಿಯುತ್ತಿದ್ದಾರೆ ಎನ್ನುವುದನ್ನು ಈ ಸಭೆಗೆ ಸರ್ಕಾರದವರು ತಿಳಿಸುವವರೆಗೂ ಈ ವರದಿಯ ಮೇಲೆ ಚರ್ಚೆ ಮಾಡುವುದರಿಂದ ವೃಥಾ ಕಾಲಕ್ಷೇಪವಾಗುತ್ತದೆ. ಆದುದರಿಂದ ಸರ್ಕಾರದವರು, ಕೇಂದ್ರ ಸರ್ಕಾರದ ಗೃಹ ಸಚಿವರ ಹೇಳಿಕೆಯ ಹಿಂದೆ ಅಡಗಿರುವ ಅರ್ಥವೇನು, ಅದರ ನಿಜವಾದ ಅರ್ಥವೇನು ಎಂದು ತಿಳಿಸಬೇಕು ಮತ್ತು ನಾವು ಈ ವರದಿಯನ್ನು ಚರ್ಚೆಮಾಡುವುದರಿಂದ ಕಾಲವ್ಯಯವಾಗುವುದಿಲ್ಲವೇ ಎಂದು ಯೋಚನೆ ಮಾಡಬೇಕು. ಸರ್ಕಾರದವರು ಸರಿಯಾದ ಉತ್ತರವನ್ನು ಕೊಟ್ಟರೆ ಮುಂದಿನ ಚರ್ಚೆಯಿಂದ ಅನುಕೂಲವಾಗುತ್ತದೆ, ಅದರಿಂದ ಪ್ರಯೋಜನವಾಗುತ್ತದೆ, ಇಲ್ಲದೆ ಇದ್ದರೆ ಕಾಲವ್ಯರ್ಥವಾಗುತ್ತದೆ ಎಂದು ಹೇಳುತ್ತೇನೆ. ಸರ್ಕಾರದವರು ಉತ್ತರಕೊಟ್ಟ ನಂತರ ಪುನಃ ಚರ್ಚೆಯಲ್ಲಿ ಭಾಗವಹಿಸಬೇಕೆಂದಿದ್ದೇನೆ.

ಉಪಾಧ್ಯಕ್ಷರು.—ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಆಗಲೇ ಮಾತನಾಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಆ ವಿಷಯ ಪತ್ರಿಕೆಯಲ್ಲಿ ಬಂದಿದೆ, ಅದನ್ನು ಇನ್ನೂ ನೋಡಬೇಕು. ಅದರ ಮೇಲೆ ಏನು ಹೇಳಬಹುದೋ ಅದನ್ನು ಹೇಳುತ್ತೇನೆ ಎಂದು ತಿಳಿಸಿದರು. ಪಾರ್ಲಿಮೆಂಟಿನಲ್ಲಿ ಗೃಹ ಸಚಿವರು ಮಾಡಿರತಕ್ಕ ಹೇಳಿಕೆ ಎಲ್ಲ ಪತ್ರಿಕೆಗಳಲ್ಲಿಯೂ ಬಂದಿದೆ. ಅಷ್ಟೊಂದು ಬೇಜವಾಬ್ದಾರಿಯಿಂದ ಪತ್ರಿಕೆಗಳವರು ವರದಿ ಮಾಡುತ್ತಾರೆಯೇ ? ಪಾರ್ಲಿಮೆಂಟಿನಲ್ಲಿ ನಡೆದ ಸಭೆಯ ಕಾರ್ಯಕಲಾಪಗಳನ್ನು ಖುದ್ದಾಗಿ ನೋಡಿ ವರದಿ ಮಾಡಿದ್ದಾರೆ. ಅದು ಬಂದ ತಕ್ಷಣ, ನಮ್ಮ ಸರ್ಕಾರದವರಿಗೆ ಏನಾದರೂ ಅನುಮಾನವಿದ್ದ ಪಕ್ಷದಲ್ಲಿ ದೆಹಲಿಗೆ ಟ್ರಂಕ್‌ಕಾಲ್ ಹಾಕಿ ವಿಚಾರ ಮಾಡಬಹುದಾಗಿತ್ತು. ಈ ರೀತಿಯ ವರದಿ ಪತ್ರಿಕೆಗಳಲ್ಲಿ ಬಂದಿದೆ, ಈ ವರದಿ ನಿಜವೇ ಹೇಗೆ ಎಂದು ತಿಳಿದುಕೊಳ್ಳಬಹುದಾಗಿತ್ತು. ಸರ್ಕಾರದವರಿಗೆ ಟ್ರಂಕ್‌ಕಾಲ್ ಸಿಕ್ಕುವುದು ಕಷ್ಟವೇನಲ್ಲ. ನಮ್ಮಂಥವರಿಗೇ ಒಂದು ಗಂಟೆಯ ಕಾಲದಲ್ಲಿ ಸಿಕ್ಕುತ್ತದೆ. ಅಂಥದ್ದರಲ್ಲಿ ಈ ರಾಜ್ಯದ ಸರ್ಕಾರ ಕೇಂದ್ರ ಸರ್ಕಾರದೊಡನೆ ಮಾತನಾಡಬೇಕು ಎಂದರೆ ಕೇವಲ ಒಂದೆರಡು ನಿಮಿಷಗಳಲ್ಲಿ ಟ್ರಂಕ್‌ಕಾಲ್ ತೆಗೆದುಕೊಂಡು ಮಾತನಾಡಬಹುದು. ನೀವು ಕೇಂದ್ರ ಸರ್ಕಾರದವರೊಡನೆ ಮಾತನಾಡಿ ಅವರು ತೀರ್ಮಾನವನ್ನು ನಿಜವಾಗಿಯೂ ಹೀಗೆಯೇ ಮಾಡಿದ್ದಾರೆ ಎಂದು ತಿಳಿದುಕೊಳ್ಳಬಹುದಾಗಿತ್ತು. ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರೆ ಅದನ್ನು ನಾವು ಏನು ಎಂದು ಕರೆಯಬೇಕು. ಇದು ಬೇಜವಾಬ್ದಾರಿಯಾದ ಹೇಳಿಕೆ ಎಂದು ಕರೆಯುತ್ತೇವೆ. ಇದು ಸರಿಯಾದ ಹೇಳಿಕೆಯೇ ? ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಅಧಿಕೃತವಾಗಿ ಬರಲಿ ಎಂದರೆ ಇದನ್ನು ನಂಬುವುದಕ್ಕಾಗುವುದಿಲ್ಲ. ದಯವಿಟ್ಟು ಈಗಲಾದರೂ ಕೂಡ ಸರ್ಕಾರ ಹೇಳಲಿ. ಈ ಚರ್ಚೆಗೆ ಪುಷ್ಟಿ ಬರಬೇಕಾದರೆ ಅವರು ಹೇಳಲೇ ಬೇಕು. ಇಲ್ಲದಿದ್ದರೆ ನಮ್ಮ ಚರ್ಚೆಗೂ ಕೂಡ ಒಂದು ಬಲ ಬರುವುದಿಲ್ಲ. ಇದನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತೇನೆ. ಈಗಲಾದರೂ ಪ್ರಯತ್ನಮಾಡಿ ಹೇಳಿದರೂ ಕೂಡ ಈ ಸಭೆಗೆ ಉಪಕಾರ ಮಾಡಿದಂತಾಗುತ್ತದೆ. ದಯವಿಟ್ಟು ಇದನ್ನು ಮಾಡಬೇಕು ಎಂದು ಪ್ರಾರ್ಥನೆಮಾಡುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮುಖ್ಯ ಮಂತ್ರಿಗಳು ಹೇಳಿದಂಥ ಹೇಳಿಕೆ ಪೂರ್ಣವಾಗಿ ತಿಳಿದುಕೊಂಡಿಲ್ಲ. ಅವರು ಕೇಂದ್ರ ಸರ್ಕಾರದವರು ಮಹಾಜನ್‌ರ ವರದಿ ಮೇಲೆ ತೀರ್ಮಾನ ತೆಗೆದುಕೊಂಡಿಲ್ಲ, ತೆಗೆದುಕೊಳ್ಳಬೇಕಾಗಿತ್ತು ಎಂದು ಹೇಳಿದ್ದಾರೆ. ಜೊತೆಗೆ ಕೇಂದ್ರ ಸರ್ಕಾರದವರು ಏನು ತೀರ್ಮಾನ ತೆಗೆದುಕೊಳ್ಳುವುದಾದರೂ ಕೂಡ ಈ ಮಾನ್ಯ ಸಭೆಯ ಅಭಿಪ್ರಾಯ ತಿಳಿದುಕೊಂಡು ತೆಗೆದುಕೊಳ್ಳಬೇಕೇ ವಿನಾ ಬೇರೆ ಗತ್ಯಂತರವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಈ ಮಾನ್ಯ ಸಭೆಯ ಅಭಿಪ್ರಾಯವನ್ನು ತಿಳಿದುಕೊಂಡು ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಅವರ ಮನಸ್ಸಿಗೆ ಬಂದ ಹಾಗೆ ಪಾರ್ಲಿಮೆಂಟ್‌ನಲ್ಲಿ ಕೊಡುವುದಕ್ಕೆ ಅಧಿಕಾರ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ನನ್ನ ಕ್ರಿಯಾಲೋಪ ಇಷ್ಟೇ. ಮಹಾಜನ್ ವರದಿ ಬಗ್ಗೆ ಗೃಹ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ನಿನ್ನೆಯೂ ಕೂಡ ಮತ್ತೊಂದು ಹೇಳಿಕೆ ಕೊಟ್ಟಿದ್ದಾರೆ. ಜೊತೆಗೆ ಪಿ.ಟಿ.ಐ. ರಿಪೋರ್ಟ್ ಇದೆ. ಈ ವಿಷಯವಾಗಿ ನಮ್ಮ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ಈ ವರದಿಗೆ ಏನು ಬೆಲೆ ಇದೆಯೋ ಇಲ್ಲವೋ ನಮಗೆ ಅನುಮಾನವಾಗಿದೆ.

Mr. DEPUTY SPEAKER.—It is not a point of order.

† ಶ್ರೀ ಬಿ. ವಿ ಮಾಗಾವಿ (ಹಾವೇರಿ).—ಮಾನ್ಯ ಸಭಾಪತಿಗಳೇ, ಭರತಖಂಡದಲ್ಲಿ ಮೈಸೂರು ಹಾಗೂ ಮಹಾರಾಷ್ಟ್ರದ ಗಡಿವಿವಾದ ಅಂತರರಾಷ್ಟ್ರ ಗಡಿವಿವಾದಕ್ಕಿಂತಲೂ ಒಂದು ಬೃಹತ್ ಸ್ವರೂಪ ತಾಳಿ, ದೇಶದ ಒಳಗೂ, ಹೊರಗೂ ಬಹಳ ದೊಡ್ಡ ಸುದ್ದಿ ಎನಿಸಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರ ಎಂದರೆ ಪಾಕಿಸ್ಥಾನ ಹಿಂದೂಸ್ಥಾನದ ಹಾಗಲ್ಲದೆ ಇವು ಒಂದೇ ರಾಷ್ಟ್ರದ ಎರಡು ರಾಜ್ಯಗಳು ಆಗಿದ್ದರೂ, ಇಷ್ಟೊಂದು ದೊಡ್ಡ ರೀತಿಯಿಂದ ಗಡಿ ಸಮಸ್ಯೆ ಹೇಗೆ ಉದ್ಭವಿಸಿತು ಎಂದು ಪರಕೀಯರಲ್ಲಿ ಕುತೂಹಲ ಉಂಟುಮಾಡಿದೆ. ಅಮೇರಿಕಾದ ಟೈಮ್ಸ್ ಪತ್ರಿಕೆ ನೋಡಿದರೆ ಇದು ಭಾರತದ ಘನತೆಗೆ ಎಷ್ಟೊಂದು ಕುಂದು ತಂದಿದೆ ಎನ್ನುವುದು ಗೊತ್ತಾಗುತ್ತದೆ. ಇಂತಹ ಚಿಕ್ಕ ಪುಟ್ಟ ವಿವಾದವನ್ನು ಮಹಾರಾಷ್ಟ್ರೀಯರು ಸ್ಟೇಟ್ ರೀಆರ್ಗನೈಸೇಷನ್ ಕಮಿಟಿ ರಿಪೋರ್ಟ್ ಪಾರ್ಲಿಮೆಂಟಿನಲ್ಲಿ ಅಂಗೀಕಾರ ಆದಂದಿನಿಂದಲೂ ಮುಂದುವರಿಸಿಕೊಂಡು ಬಂದಿದ್ದಾರೆ. ಭಾರತ ದೇಶದಲ್ಲಿ ಕನ್ನಡ ರಾಜ್ಯದ ಪ್ರದೇಶಗಳು ಹೊರಗಡೆ ಉಳಿದುಕೊಂಡಿದ್ದಷ್ಟು ಯಾವ ರಾಜ್ಯದ ಪ್ರದೇಶಗಳೂ ಉಳಿದುಕೊಂಡಿಲ್ಲ. ಆದರೂ ಕೂಡ ಕನ್ನಡಿಗರು ವಿಶಾಲ ಮನೋಭಾವನೆಯಿಂದ ಒಂದೇ ರಾಷ್ಟ್ರದವರು ಎಂದು ತಿಳಿದುಕೊಂಡು ನಮ್ಮ ಗಡಿ ಸಮಸ್ಯೆಯನ್ನು ದೊಡ್ಡದು ಮಾಡುವುದು ಬೇಡ ಎನ್ನುವ ಉದ್ದೇಶ ಇಟ್ಟುಕೊಂಡು ಇದರ ಬಗ್ಗೆ ಹೆಚ್ಚಿನ ಮಹತ್ವ ಕೊಡದೆ ಇದುವರೆಗೂ ಸಹಿಸಿಕೊಂಡು ಬಂದಿದ್ದಾರೆ. ಎ.ಐ.ಸಿ.ಸಿ. ಮುಂಬೈನಲ್ಲಿ ಸೇರಿದಾಗ ಮಹಾರಾಷ್ಟ್ರದ ಕೆಲವು ಮುಖಂಡರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೇಲೆ ಒತ್ತಾಯ ತರುವ ಸಲುವಾಗಿ ಭಾರತದ ಸಂಗ್ರಾಮದಲ್ಲಿ ಅಗ್ರಗಣ್ಯರಾಗಿದ್ದ 80 ವರ್ಷದ ಸೇನಾಪತಿ ಬಾಪಟರಿಂದ ಉಪವಾಸ ಪ್ರಾರಂಭಿಸಿ, ಇಂದಿರಾಗಾಂಧಿಯವರ ಮೇಲೆ ಒತ್ತಾಯ ತಂದರು. ಏತಕ್ಕೆ ಉಪವಾಸ ಮಾಡುತ್ತೇನೆ ಎನ್ನುವ ವಿಷಯವನ್ನು ಸೇನಾಪತಿ ಬಾಪಟ್‌ರವರು ಮುಂಬೈ ಹಿಂದೂ ಪತ್ರಿಕೆ ದಿನಾಂಕ 8 ಜುಲೈ 1966 ರಲ್ಲಿ ಬರೆದಿದ್ದಾರೆ: "I did not join the fast for a principle, I only went to fast because I promised a friend of mine, that if he went on a fast, I will join him" ಎಂದು. ಬಾಪಟರಿಗೆ ಕಿವಿಯೂ ಕೇಳಿಸುತ್ತಾ ಇರಲಿಲ್ಲ. ಅಂತಹವರನ್ನು ದುರುಪಯೋಗಪಡಿಸಿಕೊಂಡು ಅಲ್ಲಿಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೇಲೆ ಪರಿಣಾಮವಾಗುವ ರೀತಿಯಲ್ಲಿ ಉಪವಾಸ ಮಾಡಿಸಿದರು. 80 ವರ್ಷದ ವಯೋವೃದ್ಧರು ಉಪವಾಸ ಮಾಡಿ ಸತ್ತು ಹೋದರೆ ಏನು ಗತಿ ಎಂದು ಸಮಿತಿ ನೇಮಿಸುವುದಕ್ಕೆ ಒಪ್ಪಿಕೊಂಡರು. ಇನ್ನೂ ಹೆಚ್ಚಾಗಿ ಸೇನಾಪತಿ ಬಾಪಟರವರನ್ನು ದುರುಪಯೋಗಪಡಿಸಿಕೊಳ್ಳಬೇಕು ಎಂದು ಮಹಾರಾಷ್ಟ್ರ ಮಿತ್ರರು ಪ್ರಯತ್ನದಲ್ಲಿ ಇದ್ದಾಗಲೇ ದೇವರು ಆ ಮಹಾಮುಖಂಡರನ್ನು ಇಲ್ಲಿಯವರೆಗೂ ಒಳ್ಳೆಯ ಹೆಸರು ತೆಗೆದುಕೊಂಡಿದ್ದೀರಿ, ಇನ್ನು ನನ್ನ ಲೋಕಕ್ಕೆ ಬಂದುಬಿಡಿ ಎಂದು ತನ್ನೊಡನೆ ಕರೆದುಕೊಂಡು ಹೋದರು. ಈ ರೀತಿ ಬಾಪಟರನ್ನು ದುರುಪಯೋಗಪಡಿಸಿಕೊಂಡ ಮೇಲೆ ಒಂದು ಆಯೋಗ ರಚನೆ ಆಯಿತು. ಬರೀ ಕಾಂಗ್ರೆಸ್ಸಿನವರೇ ಅಲ್ಲ, ಒಕ್ಕೊರಲಿನಿಂದ ಎಲ್ಲರೂ ಸೇರಿ ಈ ಏಕ ಸದಸ್ಯ ಆಯೋಗವನ್ನು ರಚಿಸಬಾರದು ಎಂದು ಪ್ರತಿಭಟಿಸಿದರು. ಈ ಆಯೋಗ ರಚನೆಯನ್ನು ಒತ್ತಾಯದಿಂದ ಮಾಡಿದ ಮೇಲೆ ಇದನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪು ಇಲ್ಲ ಎಂದು ನಾನು ಈ ಮನೆಯ ಒಳಗೂ ಹೊರಗೂ ಪ್ರತಿಪಾದಿಸಿದ್ದೇನೆ.

ಈಪೊತ್ತು ಈ ಒಂದು ವ್ಯಾಜ್ಯದಲ್ಲಿ ಎರಡು ಪಕ್ಷಗಳು ಇದ್ದು ಒಂದು ಪಕ್ಷದವರು ಈ ಒಂದು ಆಯೋಗ ರಚನೆ ಆಗಲೇಬೇಕು ಎಂದು ಹೇಳಿದಾಗ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನು ಕೆಲವರು ಈ ಏಕ ಸದಸ್ಯ ಆಯೋಗ ಆಗಬಾರದು ಇದರಲ್ಲಿ ಮೂರು ಜನ ಸದಸ್ಯರು ಇರಬೇಕೆಂದು ಪ್ರತಿಪಾದನೆ ಮಾಡಿದರು. ಒಬ್ಬ ನ್ಯಾಯಾಧೀಶರೇ ಇದ್ದರೂ ಕೂಡ ಅವರು ಬಹಳ ದಕ್ಷರು, ನ್ಯಾಯದ ಕಡೆಯೇ ವಾಲುತ್ತಾರೆ, ಅನ್ಯಾಯದ ಕಡೆ ವಾಲುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಅದಕ್ಕನುಸಾರವಾಗಿಯೇ ಮಹಾಜನ್‌ರವರು ನಿಷ್ಪಕ್ಷಪಾತವಾಗಿ ತೀರ್ಮಾನ ನೀಡಿದ್ದಾರೆ. ಆಯೋಗ ರಚನೆಯಾದಮೇಲೆ ಮಹಾರಾಷ್ಟ್ರದ ಮುಖಂಡರು ಮಹಾಜನರನ್ನು ಮುಕ್ತಕಂಠದಿಂದ ಹೊಗಳಿದರು, ಅವರು ನ್ಯಾಯನಿಷ್ಠುರರು, ನ್ಯಾಯವೇತ್ತರು ಎಂದು ಅನೇಕ ರೀತಿಯಿಂದ ಹೊಗಳಿದರು.

(ಶ್ರೀ ಬಿ. ವಿ. ಮಾಗಾವಿ)

ಆ ಮೇಲೆ ವರದಿ ಬಂದಮೇಲೆ ತಮಗೆ ಬೇಕಾಗಿದ್ದ ಬೆಳಗಾವಿ ಮತ್ತು ಕಾರವಾರ ಈ ಎರಡೂ ಕೂಡ ಮಹಾರಾಷ್ಟ್ರಕ್ಕೆ ಸೇರುವಂತೆ ಶಿಫಾರಸು ಮಾಡಿಲ್ಲವೆಂದು ತಿಳಿದಮೇಲೆ ಮಹಾರಾಷ್ಟ್ರದವರು ತಮ್ಮ ವಾದಸರಣಿಯನ್ನೇ ಬದಲಾಯಿಸಿದರು. ಮರಾಠಿಯಲ್ಲಿ ಬಯ್ಯಲು ಬೇಕಾದಷ್ಟು ಶಬ್ದಗಳಿವೆ, ಅವನ್ನೆಲ್ಲಾ ಉಪಯೋಗಿಸಿ ವಿಚಾರ ಶೂನ್ಯರು ಎಂದು ಮುಂತಾಗಿ ಅನೇಕ ಅಶ್ಲೀಲ ಶಬ್ದಗಳನ್ನು ಉಪಯೋಗಿಸಿ ವರದಿಯನ್ನು ತಿರಸ್ಕರಿಸಿದರು. ಮರಾಠಿ ಭಾಷೆಯಲ್ಲಿರುವ ಬೈಗಳು ಬೇರೆ ಭಾಷೆಯಲ್ಲಿಲ್ಲ. ಕೊಂಕಣ್ ಭಾಷೆಯಲ್ಲಿ ಬೈಯುವುದಕ್ಕೆ ಸರಿಯಾದ ಶಬ್ದಗಳು ಸಾಕಷ್ಟಿಲ್ಲ. ಆದುದರಿಂದ ಕೊಂಕಣಿಯವರು ಬಯ್ಯಬೇಕಾದರೆ ಮರಾಠಿಯಲ್ಲಿ ಬಯ್ಯುತ್ತಾರೆ. ಹಾಗೆಂದ ಮಾತ್ರಕ್ಕೆ ಮರಾಠಿಯು ಕೊಂಕಣಿಯ ಉಪಭಾಷೆಯಲ್ಲ. ಕೊಂಕಣಿಯವರು ಬಯ್ಯಬೇಕಾದರೆ ಮರಾಠಿಯಲ್ಲಿ ಬಯ್ಯುತ್ತಾರೆ, ಒಳ್ಳೆಯ ಮಾತುಗಳನ್ನು ಹೇಳಬೇಕಾದರೆ ಕನ್ನಡದಲ್ಲಿ ಹೇಳುತ್ತಾರೆ. ಮಹಾಜನ್ ಆಯೋಗದ ವರದಿ ಕರ್ಣಾಟಕಕ್ಕೆ ಅಷ್ಟೊಂದು ಅನುಕೂಲವಾಗಿ ಇಲ್ಲದಿದ್ದರೂ ಕನ್ನಡಿಗರು ಅದನ್ನು ತಿರಸ್ಕಾರಮಾಡುತ್ತಿಲ್ಲ. ಡೇನಿಯಲ್ ಎಂಬ ಹೆಸರನ್ನು ಇಂಗ್ಲೀಷಿನಲ್ಲಿ ಒಳ್ಳೆಯದನ್ನು ಹೇಳುವುದಕ್ಕೆ ಉಪಯೋಗಿಸುವಂತೆ ಮಹಾಜನ್‌ರವರ ವಿಚಾರದಲ್ಲೂ ಕೂಡ ಕನ್ನಡಿಗರು ಅವರು ಯೋಗ್ಯ ರೀತಿಯಲ್ಲಿ ತೀರ್ಮಾನಮಾಡಿದ್ದಾರೆ ಎಂದು ಹೊಗಳಿದ್ದಾರೆ. ಮಹಾಜನ್‌ರವರು ಯೋಗ್ಯ ರೀತಿಯಲ್ಲಿ ನ್ಯಾಯ ತೀರ್ಮಾನ ಮಾಡಿ ಇಂದು ಅಜರಾಮರರಾಗಿದ್ದಾರೆ ಎಂದು ಹೇಳುವಾಗ ಕರ್ಣಾಟಕಕ್ಕೆ ಅವರ ವರದಿಯಿಂದ ಅನುಕೂಲವಾಗಿಲ್ಲದಿದ್ದರೂ ಕೂಡ ನ್ಯಾಯವಾದಿಗಳನ್ನು ನಿಷ್ಠೂರ ಮಾಡುವುದು ಯೋಗ್ಯವಲ್ಲ. ಅವರು ವರದಿಯನ್ನು ಚೆನ್ನಾಗಿ ಬರೆದಿದ್ದಾರೆ, ಯಾವುದೇ ಪಕ್ಷದ ಕಡೆಗೆ ಒಲವು ತೋರಿಸದೆ ಎಲ್ಲವನ್ನೂ ವಿಚಾರಮಾಡಿ ನ್ಯಾಯವಾಗಿ ವರದಿಮಾಡಿದ್ದಾರೆ, ಬಹಳ ಚೆನ್ನಾಗಿ ಬರೆದಿದ್ದಾರೆ ಬಹುಶಃ ಅವರು ಜೀವಂತವಾಗಿದ್ದರೆ ನದಿ ನೀರಿನ ವಿವಾದವನ್ನು ಅವರಿಗೆ ಒಪ್ಪಿಸಿ ಎಂದು ವೀರೇಂದ್ರ ಪಾಟೀಲರಿಗೆ ಹೇಳಬಹುದಾಗಿತ್ತು. ಆದರೆ ಅವರು ಅಕಸ್ಮಾತ್ ಕಾಲವಶರಾದರು. ಬಹುಶಃ ವಸಂತರಾವ್ ನಾಯಕರಿಂದ ವರದಿ ಬರೆಸಿದ್ದರೆ ಮಹಾರಾಷ್ಟ್ರದವರಿಗೆ ಅನುಕೂಲವಾಗುತ್ತಿತ್ತು ಎಂದು ಕಾಣುತ್ತದೆ. ಆದರೆ ಅವರು ನ್ಯಾಯಾಸ್ಥಾನದಲ್ಲಿ ಕುಳಿತು ಒಳ್ಳೆಯ ರೀತಿಯಲ್ಲಿ ಬರೆಯಲಾರರು ಎಂಬ ಅಭಿಪ್ರಾಯವಿದೆ. ಬಹುಶಃ ಬೆಳಗಾವಿ ಮತ್ತು ಕಾರವಾರ ತಮಗೆ ಸೇರಿದರೆ ಗೋವೆ ಕಬಳಿಸಲು ಅನುಕೂಲವಾಗುವುದೆಂದು ಮಹಾರಾಷ್ಟ್ರ ಭಾವಿಸಿತ್ತೆಂದು ಕಾಣುತ್ತದೆ. ಎಸ್. ಆರ್. ಸಿ. ವರದಿಯಲ್ಲಿ ಪಣಿಕ್ಕರ್‌ರವರು ಬೆಳಗಾವಿ ಯಾರಿಗೆ ಸೇರುವುದೋ ಅವರಿಗೆ ಗೋವ ಸಹ ಸೇರಬೇಕು ಎಂಬ ಅಭಿಪ್ರಾಯ ಸೂಚಿಸಿದ್ದರೆಂದು ಕೇಳಿದ್ದೇನೆ. ಅದೇ ಉದ್ದೇಶದಿಂದ ಮಹಾರಾಷ್ಟ್ರದವರು ಬೆಳಗಾವಿ ಮತ್ತು ಕಾರವಾರಗಳನ್ನು ಕೇಳುತ್ತಿದ್ದರು. ಮುಂದೆ ಗೋವ ತಮ್ಮ ಕೈವಶಮಾಡಿಕೊಳ್ಳಬಹುದೆಂಬ ಅಭಿಪ್ರಾಯ ಮಹಾರಾಷ್ಟ್ರದವರಿಗಿತ್ತು. ಗೋವೆ ವಿಷಯದಲ್ಲಿ ಪಂಡಿತ ನೆಹರುರವರ ಆಶ್ವಾಸನೆಯನ್ನು ಬದಿಗೊತ್ತಿ ಕೇಂದ್ರ ಸರಕಾರ ಅಲ್ಲಿ ಅಭಿಪ್ರಾಯ ಸಂಗ್ರಹಮಾಡಿತು. ಆಗ ತಮಾಷೆ ನೋಡಲು ನಾನು ಗೋವಾಕ್ಕೆ ಹೋಗಿದ್ದೆ, ಅದು ನಮ್ಮ ಊರಿನಿಂದ ಸುಮಾರು ನೂರು ಮೈಲಿ ದೂರದಲ್ಲಿದೆ. ಗೋವಾದವರು ಮಹಾರಾಷ್ಟ್ರದೊಂದಿಗೆ ವಿಲೀನವಾಗಲು ಒಪ್ಪಲಿಲ್ಲ. ಗೋವ ತಮಗೆ ಹೇಗಾದರೂ ಸೇರಿಸಿಕೊಳ್ಳಬೇಕೆಂದು ಏನೇ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ, ಬಂದೋಡ್ಕರ್‌ರವರು ಅಧಿಕಾರದಲ್ಲಿದ್ದಾಗ ವಸಂತರಾವ್ ನಾಯಕರು ಬಹಳ ಹಣ ಖರ್ಚುಮಾಡಿದರೂ ಕೂಡ ಏನು ಮಾಡುವುದಕ್ಕೂ ಸಾಧ್ಯವಾಗಲಿಲ್ಲ.

Sri B. P. KADAM (Karwar).—On a point of order: whether persons who are not in this House can be referred to here, because they are not here to defend themselves? Is it Charitable?

Sri B. V. MAGAVI.—They are intimately connected with the issue. We have left all charities to Maharashtra. 400 ವರ್ಷಗಳವರೆಗೆ ಪೋರ್ಚುಗೀಸರ ದಬ್ಬಾಳಿಕೆಯಿಂದ ಗೋವ ಜನರ ಶಕ್ತಿಯೇನೂ ಕುಗ್ಗಿಲ್ಲ. ಇದನ್ನು ಗೋವಾದಲ್ಲಿ ಚುನಾವಣೆಗೆ ಸಂಬಂಧಪಟ್ಟಂತೆ ಅಭಿಪ್ರಾಯ ಸಂಗ್ರಹ ಮಾಡಿದಾಗ ನೋಡಬಹುದಾಗಿತ್ತು. ಗೋವ ಮಹಾರಾಷ್ಟ್ರದಲ್ಲಿ ವಿಲೀನವಾಗದ ಹೊರತು ಅದರ ಆರ್ಥಿಕಾಭಿವೃದ್ಧಿಯಾಗುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ ಮತ ಸಂಗ್ರಹ ಮಾಡಿದಾಗ ಗೋವಾದ ಜನರು ಮಹಾರಾಷ್ಟ್ರದವರ ದಾಸ್ಯದಲ್ಲಿರುವುದು ಬೇಕಾಗಿಲ್ಲ, ತಮಗೆ ಸ್ವಾತಂತ್ರ್ಯ ಬೇಕು ಎಂದು ಸಾರಿದರು. ಮಹಾರಾಷ್ಟ್ರದವರ ವಿಚಾರ ಗೋವಾದ ಜನರಿಗೆ ಚೆನ್ನಾಗಿ ಗೊತ್ತಿದೆ.

Sri B. P. KADAM.—On a point of order: whether Goa can be discussed under this report? Is it incorporated in this report?

Sri B. V. MAGAVI.—It is pertinent. All expansionist tendencies of Maharashtra come under this issue.

Sri V. N. PATIL (Humnabad).—Why should the Hon'ble Member Mr. Kadam get offended if we mention the name of Goa? All parts of of India, wherever Karnataka has some interest come under this.

ಶ್ರೀ ಬಿ. ವಿ. ಮಾಗಾವಿ.—ಕೊನೆಗೆ ಏನಾಯಿತೆಂದರೆ ಸುಮ್ಮನೆ ಮಹಾರಾಷ್ಟ್ರದವರು ಹಣ ಕಳೆದುಕೊಂಡರು, ಗೋವೆಯಲ್ಲಿ ಅವರಿಗೆ ಅನುಕೂಲವಾದ ಅಭಿಪ್ರಾಯ ಸಿಕ್ಕಲಿಲ್ಲ. ಗೋವೆಯನ್ನು ಅವರು ಕಳೆದುಕೊಂಡರು. ಈ ದಿವಸ ಮಹಾರಾಷ್ಟ್ರ ಏಕೀಕರಣ ಸಮಿತಿ ಅಧಿಕಾರದಲ್ಲಿರಬಹುದು, ಇದ್ದರೂ ಕೂಡ ಗೋವೆಯ ಅಭಿಪ್ರಾಯ ಮಹಾರಾಷ್ಟ್ರದಲ್ಲಿ ವಿಲೀನ ವಾಗಬೇಕೆಂದಿಲ್ಲ. ಗೋವೆಗಾಗಿ ಹಣ ಕಳೆದುಕೊಂಡಮೇಲೆ ಏಕ ಸದಸ್ಯ ಆಯೋಗಕ್ಕೆ ಒತ್ತಾಯ ಮಾಡಿ ಮೈಸೂರು ಸರಕಾರವನ್ನು ಒಪ್ಪಿಸಿ ಏನಾದರೂ ಮಾಡಿ ಬೆಳಗಾವಿ, ಕಾರವಾರ ಪಡೆದು ಕೊಂಡರೆ ಗೋವೆಯನ್ನು ಪಡೆಯಲು ಅನುಕೂಲವಾಗುತ್ತದೆ ಎಂದು ಆ ಪ್ರಯತ್ನಮಾಡಿದರು.

ವರ್ಕಿಂಗ್ ಕಮಿಟಿ ರೆಸಲ್ಯೂಷನ್ ಆಯೋಗ ನೇಮಕ ಮಾಡುವ ಮೊದಲೇ ಅದರ ಶಿಫಾರಸು ಗಳು ಉಭಯ ಪಕ್ಷಗಳಿಗೂ ಬಂಧನಕಾರಿ ಎಂದು ಸ್ಪಷ್ಟವಾಗಿತ್ತು. ಈ ವಿವಾದವನ್ನು ಅಂತಿಮ ವಾಗಿ ಬಗೆಹರಿಸಬೇಕು ಎಂಬ ಉದ್ದೇಶದಿಂದ ಮಾನ್ಯ ಶ್ರೀ ನಿಜಲಿಂಗಪ್ಪನವರು ಈ ವರದಿಯ ಬಗ್ಗೆ ಯಾರು ಏನೇ ಅಂದರೂ ಇದನ್ನು ನಾವು ಸ್ವೀಕರಿಸುತ್ತೇವೆ ಎಂದು ಹೇಳಿರುವುದನ್ನು ನೋಡಿದರೆ ಇದು ನಮ್ಮ ರಾಷ್ಟ್ರೀಯ ಮನೋಭಾವವನ್ನು ಎತ್ತಿ ತೋರಿಸುತ್ತದೆ. ನಮ್ಮ ಭಾಗಗಳು ಅನೇಕವು ಇತರ ರಾಜ್ಯಗಳಲ್ಲಿ ಉಳಿದಿವೆ ಅಂದಾಕ್ಷಣಕ್ಕೇ ಅವೇನು ಪಾಕೀಸ್ಥಾನದಲ್ಲಿ ಉಳಿದಿವೆಯೇ ಅಥವಾ ಚೈನಾದಲ್ಲಿ ಉಳಿದಿವೆಯೇ? ಅವು ಭಾರತದ ಒಂದು ಭಾಗದಲ್ಲಿ ಉಳಿದಿರುವುದರಿಂದ ಕಟ್ಟುನಿಟ್ಟಾಗಿ ಇಂತಹ ಕಡೆಗಳಿಗೇ ಸೇರಬೇಕೆಂದು ಹಟ ಹಿಡಿಯುವುದು ಬೇಡ, ಅವನ್ನು ಒಂದು ಸೌಹಾರ್ದ ರೀತಿಯಲ್ಲಿ ಬಗೆಹರಿಸಿಕೊಂಡು ನಾವು, ಸೈನಿಕ್‌ರವರು ಮತ್ತು ಕಾರವಾರದ ಮುಖಂಡರಾದ ಕದಂರವರು ಮಿತ್ರರಾಗಿ ಬಾಳೋಣ.

11-30 A.M.

Sri B. P. KADAM.—I rise to a point of order. He must use the prefix "Hon'ble Member" before names.

Sri B. V. MAGAVI.—I have never denied the honour due to the hon'hle Member.

ಶ್ರೀಮಾನ್ ನಿಜಲಿಂಗಪ್ಪನವರು ಈ ರೀತಿ ಹೇಳಿದಮೇಲೆ, ಶ್ರೀ ನಾಯಕ್‌ರವರು ತಮ್ಮ ದೊಡ್ಡತನ ಪ್ರದರ್ಶನ ಮಾಡುವುದಕ್ಕೆ ಪ್ರಯತ್ನ ಮಾಡಿದರು, ಸೆಪ್ಟೆಂಬರ್ 13 ರಂದು ಮುಂಬೈನಲ್ಲಿ ಪತ್ರಿಕಾಪ್ರತಿನಿಧಿಗಳೊಡನೆ ಮಾತನಾಡುತ್ತಾ ಮಹಾಜನ್ ವರದಿ ಮೈಸೂರು ಮಹಾರಾಷ್ಟ್ರ ಈರ್ವರಿಗೂ ಬಂಧನಕಾರಿ, ಆ ರೀತಿ ವರ್ಕಿಂಗ್ ಕಮಿಟಿಯಲ್ಲಿ ತೀರ್ಮಾನ ಮಾಡಲಾಗಿದೆ ಎಂದು ಹೇಳಿದರು. ಮೊದಲೇ ಈ ತೀರ್ಮಾನಕ್ಕೆ ಬರಲಾಗಿತ್ತು ಎಂಬುದು ಗೊತ್ತಿದ್ದೂ ಕೂಡ ವರದಿ ಪ್ರಕಟವಾದ ನಂತರ ಬೆಳಗಾಂ ಮತ್ತು ಕಾರವಾರ ತಮಗೆ ಬರಲಿಲ್ಲವೆಂದು ಹೇಳಿ ಅಕ್ಟೋಬರ್ 18ರ ಆಯೋಗದ ಶಿಫಾರಸು ನಮ್ಮ ರಾಜ್ಯ ಸರ್ಕಾರದಮೇಲೆ ಬಂಧನಕಾರಿಯಲ್ಲ ಎಂದು ಹೇಳಿ ಮತ್ತೊಂದು ಸ್ಟೇಟ್‌ಮೆಂಟನ್ನು ಹೊರಡಿಸಿದರು. ಈ ಸಮಸ್ಯೆಯನ್ನು ನಾವು ಸಂಸತ್ತಿನ ಮಟ್ಟದಲ್ಲಿ ಬೌದ್ಧಿಕ ಮಟ್ಟದಲ್ಲಿ ಬಿಡಿಸಬೇಕೆಂದು ಹೇಳಿದರು. ಅವರ ಈ ಸಂಸತ್ತಿನ ಮಟ್ಟ, ಬೌದ್ಧಿಕಮಟ್ಟ ಏನಿದೆ ಎಂಬುದನ್ನು ಹೇಳುತ್ತೇನೆ. ಒಮ್ಮೆ ಇದು ಸಂಸತ್ತಿನ ಮಟ್ಟದಲ್ಲಿ ಚರ್ಚೆಯಾಗಿದೆ ಎಂಬುದನ್ನು ಮಹಾರಾಷ್ಟ್ರದ ಮುಖಂಡರು ಮರೆತಿದ್ದಾರೆ. ರಾಜ್ಯಪುನರ್‌ವಿಂಗಡನಾ ಆಯೋಗದ ವರದಿ ಚರ್ಚೆಯಾದದ್ದು ಸಂಸತ್ತಿನ ಮಟ್ಟದಲ್ಲಿ ಅಲ್ಲವೇ? ಅಲ್ಲಿ ಕಲಂವಾರು ಚರ್ಚೆಯಾಗಿ ಪ್ರತಿಯೊಂದು ವಿಷಯವನ್ನೂ ನಿರ್ಧರಮಾಡಿದ್ದಾರೆ. ಮಹಾರಾಷ್ಟ್ರದ ಮುಖಂಡರು ಎನ್.ವಿ. ಗ್ಯಾಡಗಿಲ್‌ರವರೂ ಸಿ.ಡಿ. ದೇಶ ಮುಖ್‌ರವರೂ ತಮ್ಮ ಅಭಿಪ್ರಾಯಗಳನ್ನು ಕೊಟ್ಟು ಹಿಂದೆ ಏನೇನು ಆಗಬೇಕೋ ಅದೆಲ್ಲಾ ಆಗಿ

(Sri B. V. MAGAVI)

ಹೋಗಿದೆ. ಈಗ ಮತ್ತೆ ಸಂಸತ್ತಿನ ವಿಷಯವನ್ನು ಅವರು ಮಾತನಾಡುತ್ತಾ ಇದ್ದಾರೆ. ಈಗ ಶ್ರೀಮಾನ್ ನಾಯಕ್‌ರವರು ರಾಷ್ಟ್ರದ ಮಿತ ಸ್ವಾತಂತ್ರ್ಯವನ್ನು ಬೇಡುತ್ತೇನೆ ಎಂದು ಹೇಳುತ್ತಾರೆ. ಗೋವಾ ಪ್ರಶ್ನೆ ಬಂದಾಗಲೂ ಕೂಡ ಇದೇ ರೀತಿ ಹಟ ಹಿಡಿದರು. ಅವರು ತಮ್ಮ ಸ್ವಂತದ ಪ್ರಶ್ನೆ ಬಂದಾಗ ಯಾವ ಒಂದು ಪಕ್ಷವನ್ನೂ ನೋಡುವುದಿಲ್ಲ, ದೇಶದ ಹಿತದೃಷ್ಟಿಯನ್ನೂ ನೋಡುವುದಿಲ್ಲ. ಅವರಿಗೆ ಮಹಾರಾಷ್ಟ್ರವೇ ದೊಡ್ಡದು. ಮಹಾರಾಷ್ಟ್ರ ಎಂದು ಹೆಸರಿದ್ದ ಮಾತ್ರಕ್ಕೆ ತಮ್ಮದೇ ಒಂದು ಮಹಾರಾಷ್ಟ್ರ ಎಂದು ಭಾವಿಸಿಕೊಂಡಿದ್ದಾರೆ. ಇವತ್ತು ಭಾರತದಲ್ಲಿ ಅದೂ ಕೂಡ ಒಂದು ರಾಜ್ಯ, ಅದು ಒಂದು ರಾಷ್ಟ್ರವಲ್ಲ ಎಂಬುದನ್ನು ಮರೆತು, ದೇಶದ ಐಕ್ಯತೆಯನ್ನೇ ಬಲ ಕೊಡಬೇಕೆಂಬಮಟ್ಟಿಗೆ ಅವರು ಹೋಗಿದ್ದಾರೆ. ಎರಡನೆಯದಾಗಿ ಬೌದ್ಧಿಕ ಮಟ್ಟದಲ್ಲಿ ಈ ಪ್ರಶ್ನೆಯನ್ನು ಬಗೆಹರಿಸಬೇಕೆಂದು ಹೇಳುವಾಗ ಇದು ಒಂದು ಹೊಸ ವಿಚಾರ ಅಂತ ಹೇಳಿ ನಮ್ಮ ಮಹಾರಾಷ್ಟ್ರದ ಮುಖಂಡರು ತಿಳಿದುಕೊಡಹಾಗೆ ಕಾಣುತ್ತದೆ. ಈ ಬುದ್ಧಿ ಎನ್ನುವುದು ಮಹಾರಾಷ್ಟ್ರದವರಿಗೇ ಗುತ್ತಿಗೆ ಅಂತ ಅನ್ನುವ ಹಾಗೆ ಮಾತನಾಡುತ್ತಾ ಇದ್ದಾರೆ. ಬೌದ್ಧಿಕ ಮಟ್ಟದ ಮೇಲೆ ಬಡಿಸಬೇಕೆಂತಲೆ ಇದಕ್ಕಾಗಿ ಮೂರು ನಾಲ್ಕು ಸಮಿತಿಗಳನ್ನು ನೇಮಕ ಮಾಡಿದ್ದಾಯಿತು. ಧಾರ್ ಸಮಿತಿ ಆಯಿತು, ಫಜಲ್ ಅಲಿ ಕಮಿಷನ್ ಆಯಿತು, ಮಹಾಜನ್ ಕಮಿಷನ್ ಆಯಿತು. ಬೆಳಗಾವಿ, ಕಾರವಾರ ಅವರಿಗೆ ಹೋಗಬೇಕೆಂದು ಯಾರೂ ಹೇಳಲಿಲ್ಲ. ಪಟಾಸ್ಕರ್ ವರದಿಯನ್ನು ನೋಡಿದರೂ ಕೂಡ ಆ ಊರುಗಳಲ್ಲಿ ಅವರಿಗೆ ಕ್ಲಿಯರ್ ಮೆಜಾರಿಟಿ ಸಿಕ್ಕುವುದಿಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಅವರು ಹೇಳುವಂತೆ ಬೌದ್ಧಿಕ ಮಟ್ಟದಲ್ಲಿ ಬಡಿಸಬೇಕೆಂದರೆ ನನ್ನ ಅಭಿಪ್ರಾಯದಲ್ಲಿ ಕಳೆದ 20 ವರ್ಷಗಳಲ್ಲಿ ಯಾವುದಾದರೂ ರಾಜ್ಯದಲ್ಲಿ ಬೌದ್ಧಿಕ ದಿವಾಳಿತನವಾಗಿದ್ದರೆ ಅದು ಮಹಾರಾಷ್ಟ್ರದಲ್ಲೇ ಎಂದು ನಾನು ಹೇಳುತ್ತೇನೆ. ಗೋವಾದಲ್ಲಿ ಅವರ ಜನರನ್ನೇ ಎದುರು ಹಾಕಿಕೊಂಡು ಅದು ಪ್ರತ್ಯೇಕವಾಗಿಯೇ ಉಳಿಯುವಂತೆ ಮಾಡಿಕೊಂಡರು. ಅದರ ಜೊತೆಗೆ ಶಿವಸೇನೆ ಎಂಬ ಒಂದು ಸಂಸ್ಥೆಯನ್ನು ಬೇರೆ ಕಟ್ಟಿದ್ದಾರೆ, ಮಹಾರಾಷ್ಟ್ರೀಯರಿಗೆ ಮಾತ್ರ ಮಹಾರಾಷ್ಟ್ರದಲ್ಲಿ ಪ್ರಾತಿನಿಧ್ಯ ಕೊಡಬೇಕು ಎಂದು ಹೇಳಿಕೊಂಡು ಇಡೀ ಭಾರತಕ್ಕೇ ಅವಹೇಳನ ಮಾಡಲು ಹೊರಟಿದ್ದಾರೆ. ಇಷ್ಟೊಂದು ಅವಹೇಳನ ಇನ್ನಾವ ರಾಜ್ಯವೂ ಕೂಡ ಮಾಡಲಿಕ್ಕೆ ಹೋಗಿಲ್ಲ. ಮಹಾಜನ್ ಕಮಿಷನ್ ಬಗ್ಗೆ ಕೂಡ ಎಲ್ಲರಕಡೆಯಿಂದಲೂ ಛೀಮಾರಿ ಹಾಕಿಸಿಕೊಂಡಿದ್ದಾರೆ. ಅದರೂ ಕೂಡ ಅವರಮೇಲೆ ಯಾವ ಪರಿಣಾಮವೂ ಆದಂತೆ ಇಲ್ಲ, ಅವರದು ಸ್ವಲ್ಪ ನಿರ್ಲಜ್ಜೆಯ ಸ್ವಾಭಾವ, ತಮಗೆ ಹೇಗೆ ತೋರುತ್ತದೋ ಅದನ್ನು ಹಾಗೆಯೇ ಮಾತನಾಡುತ್ತಲೇ ಇರುತ್ತಾರೆ. ಅದೂ ಒಂದು ಅವರ ವೈಶಿಷ್ಟ್ಯ ಸ್ವಾಮಿ. ಇಷ್ಟೊಂದು ಕೀಳುಮಟ್ಟದಲ್ಲಿ ಮಾತನಾಡತಕ್ಕ ಜನ ಎಲ್ಲ ಮಹಾರಾಷ್ಟ್ರದವರು ಅಂತ ನಾನು ಹೇಳುವುದಿಲ್ಲ. ಅವರಲ್ಲಿ ಬಿ.ಜಿ. ತಿಲಕ್‌ರವರಂಥ ಉನ್ನತ ಮಟ್ಟದ ಮುಖಂಡರೂ ಇದ್ದರು.

ಶ್ರೀ ಎಚ್. ಸಿದ್ದವೀರಪ್ಪ.—ಈ ಸಮಯದಲ್ಲಿ ಯಾರೇ ಆಗಲೀ ಮಾತನಾಡಬೇಕಾದರೆ ಸ್ವಲ್ಪ ಘನತೆ ಗಾಂಭೀರ್ಯ ಇಟ್ಟುಕೊಂಡು ಮಾತನಾಡಿದರೆ ಒಳ್ಳೆಯದು, ಇಲ್ಲಿ ನಾವು ಸ್ಟ್ರೀಟ್ ಲೆವಲ್‌ಗೆ ಇಳಿಯಲಿಕ್ಕೆ ಹೋದರೆ ಗಾಂಭೀರ್ಯ ಉಳಿಯಲಾರದು ಎಂದು ಹೇಳುತ್ತೇನೆ.

ಶ್ರೀ ಬಿ. ವಿ. ಮಾಗಾವಿ.—ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಾಲಗಂಗಾಧರ ತಿಲಕ್‌ರವರನ್ನು ಮಹಾತ್ಮಾ ಗಾಂಧಿಯವರು ತಮ್ಮ ಪೊಲಿಟಿಕಲ್ ಗುರು ಅಂತ ಕರೆದರು. ದೇಶದ ಐಕ್ಯತೆಗೆ ಮಹಾಮುಖಂಡರಾದ ಯಾವ ಬಾಲಗಂಗಾಧರ ತಿಲಕ್‌ರವರು, ಗೋಪಾಲಕೃಷ್ಣ ಗೋಖಲೆಯವರು ತಮ್ಮ ಜೀವವನ್ನೇ ಮುಡುಪಾಗಿಟ್ಟರೋ ಅಂತಹ ಒಂದು ದೇಶದಲ್ಲಿ ಇವತ್ತು ನಾಯಕ್‌ರಂಥವರು, ಚವಾನ್‌ರವರಂಥವರು ಏನು ಹೇಳುತ್ತಾ ಇದ್ದಾರೋ ಅದನ್ನು ಕೇಳಿ ಸ್ವರ್ಗದಲ್ಲಿ ಇರುವ ಅವರೂ ಕೂಡ ತಲೆತಗ್ಗಿಸಿಕೊಂಡಿರಬಹುದು ಎಂದು ನನಗೆ ಅನಿಸುತ್ತದೆ. ಇವತ್ತಿನ ದಿವಸ ಮಹಾರಾಷ್ಟ್ರದಲ್ಲಿರತಕ್ಕಂಥ ರಾವ್ ಸಾಹೇಬ್ ಪಟವರ್ಧನ್‌ರವರು, ಅಣೆಯವರು ಮಹಾಜನ್‌ರವರ ವರದಿಯನ್ನು ಒಪ್ಪಿದ್ದಾರೆ. ಇನ್ನು ಕೆಲವರು ಅವರಲ್ಲಿ ಇದ್ದಾರೆ ಅವರ ಹೆಸರನ್ನು ನಾನು ಹೇಳುವುದಿಲ್ಲ, ಇದನ್ನು ಅವರು ಸನ್ಯಾಸಿಯ ಹಾದರ ಅಂತ ಹೇಳಿದ್ದಾರೆ. ಆಚಾರ್ಯ ಅತ್ರೆ ಅಂತ ಇದ್ದಾರೆ ಅವರು ಇಂತಹ ಅಶ್ಲೀಲ ನುಡಿಯುವುದರಲ್ಲಿ ಪಳಗಿದವರು, ಈ ರೀ ಯಾಗಿ ಹೇಳಿದ್ದಾರೆ.

Sri B. P. KADAM.—I rise to a point of order. The point of order is whether a person who is not a member of this House could be introduced here for being attacked? Hon'ble Member Sri Magavi made a reference to Acharya Atre who is not a member of this House and motives are imputed against him.

Sri B. V. MAGAVI.—There is no point of order.

(*Laughter*)

Sri DIGAMBARA RAO B. KALMANKAR (Aland).—Sir, Sri Kadam raised a point of order. Hon'ble member Sri Magavi said that there is no point of order. Is he taking the privilege of the Chair and can he say that there is no point of order ?

Mr. DEPUTY SPEAKER.—Hon'ble member used the word "ashleela" but he has not used this word against any member of this House. Therefore, there is no point of order.

Sri B. P. KADAM.—Sir, I am not convinced of your ruling. If you cannot further enlighten me, I have no other go but leave the House and walk-out.

(*The member left the House*)

ಶ್ರೀ ಬಿ. ವಿ. ಮಾಗಾವಿ.—ಸ್ವಾಮಿ, ಈ ಶ್ರೀ ಬಿ. ಪಿ. ಕದಂರವರ ಬಗ್ಗೆಯೂ ಇದರಲ್ಲಿ ಒಂದು ಉಲ್ಲೇಖನವಿದೆ:

> " If the attitude of these people continues, it will prove in the ultimate result a great danger to the unity of the country".

ಹೀಗೆ ಮಹಾಜನ್ ಅವರು ಇವರ ಬಗ್ಗೆಯೂ ಒಂದು ಉಲ್ಲೇಖ ಮಾಡಿದ್ದಾರೆ. ಆದುದರಿಂದ ಇಷ್ಟೆಲ್ಲಕ್ಕೂ ಕಾರಣೀಭೂತರಾದ ಜನರು ಏನಿದ್ದಾರೆ ಅವರು ಈಗ ಮಾಡತಕ್ಕ ವಾದಗಳು ತರ್ಕ ಬದ್ಧವಾಗಿಲ್ಲ......

Mr. DEPUTY SPEAKER.—Hon'ble Member may conclude and Sri Sayanak my speak.

(*Sri Sayanak rose*)

ಶ್ರೀ ಬಿ. ವಿ. ಮಾಗಾವಿ.—ಸ್ವಾಮಿ, ನನಗೆ ಇನ್ನೊಂದು ನಿಮಿಷ ಕಾಲಾವಕಾಶ ಕೊಡಿರಿ, ನಾನು ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ. ನಾನು ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ಹೇಳಬೇಕಾದ್ದಿದೆ. ಅದೇನೆಂದರೆ, ಈ ಗಡೀವಿವಾದ ಸಮಸ್ಯೆಯನ್ನು ಒಂದು ರಾಷ್ಟ್ರೀಯ ಪ್ರಶ್ನೆಯಾಗಿ ಭಾವಿಸಬೇಕೆಂದು ಏನು ಆ ಚವಾಣರು ಹೇಳುತ್ತಿದ್ದಾರೆ ಅದು ಬೋಳ ಕುಂಬಳಕಾಯಿ ಇದ್ದಹಾಗೆ ಇದೆ. ಅದನ್ನು ಎತ್ತ ಕಡೆಗೆ ತಿರುಗಿಸಿ ನೋಡಿದರೂ ಅದು ಒಂದು ಕೊಳೆತ ಕುಂಬಳ ಕಾಯಿ ಆಗಿದೆ. ಅದರಲ್ಲಿ ಹುರುಳೇನೂ ಇಲ್ಲ. ಈ ಪ್ರಶ್ನೆಯನ್ನು ಎರಡೂ ಪಕ್ಷಗಳ ಮುಖ್ಯ ಮಂತ್ರಿಗಳು ಕಲೆತು ಒಂದು ಪರಿಹಾರಮಾರ್ಗವನ್ನು ಕಂಡುಹಿಡಿಯಬೇಕೆಂಬ ಆಸೆಯಿಂದ ನಮ್ಮ ವರಿಷ್ಠರು ಅಂದರೆ ಶ್ರೀಮಾನ್ ನಿಜಲಿಂಗಪ್ಪನವರು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳನ್ನು ಎರಡಾವರ್ತಿ ಭೆಟ್ಟಿಯಾಗಿದ್ದರು. ಆ ಇಬ್ಬರು ಮುಖ್ಯ ಮಂತ್ರಿಗಳು ಕೂಡಿದ್ದಾಗ ಅವರು ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ಈ ಹಿಂದೆ ಇದು ಆ ಪಾರ್ಲಿಯಮೆಂಟಿನಿಂದಲೂ ಸಹಾ ಬಗೆಹರಿಯಲಿಲ್ಲ. ಆಗ ಕಡೆಗೆ ಈ ಒಂದು ಕಮಿಷನನ್ನು ನೇಮಕ ಮಾಡಲಾಯಿತು. ಇಷ್ಟೆಲ್ಲಾ ಆದಮೇಲೂ ಅವರು ಒಂದು ವಿಷವಾಯುವನ್ನು ಹರಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಅದು ನ್ಯಾಯವಾದ್ದಲ್ಲ. ಈಗ ಬಂದಿರತಕ್ಕ ಮಹಾಜನ್ ವರದಿಯೇನಿದೆ ಇದನ್ನು ಒಂದು ಹೈಪವರ್ ತೀರ್ಪೆಂದು ಎಲ್ಲರೂ ಒಪ್ಪಿಕೊಳ್ಳುವುದು ಉಚಿತವಾದದ್ದು. ಇಂಥ ಒಂದು ವಿಷಮಪರಿಸ್ಥಿತಿ ಇರತಕ್ಕ ಕಾಲದಲ್ಲೂ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಆ ಕೊಯಿನಾ ಭೂಕಂಪದ ಬಗ್ಗೆ ತಮ್ಮ ರಾಜ್ಯದ ಅನುಕಂಪವನ್ನು ಸೂಚಿಸಿ ಅಲ್ಲಿ ನೊಂದವರ ಸಹಾಯಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕರ್ಣಾಟಕ ರಾಜ್ಯದ ಪರವಾಗಿ ಕೊಟ್ಟಿದ್ದಾರೆ. ಇದು ನಮ್ಮ ನಾಯಕರ ಒಂದು ಘನತೆಯನ್ನು ವ್ಯಕ್ತಪಡಿಸತಕ್ಕದ್ದಾಗಿದೆ. ನಮ್ಮ ನಾಯಕರು ನಮ್ಮ ಕನ್ನಡ ರಾಜ್ಯದ ಒಂದು ಪ್ರತೀಕವಾಗಿದ್ದಾರೆ. ನಮ್ಮ ದೇಶವು ಇಂದು ಅನೇಕ ಗಂಡಾಂತರಗಳ ದವಡೆಗೆ ಸಿಕ್ಕಿರುವಾಗ ನಾವು ಹೀಗೆ ಇಂಥಾ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಹೋದರೆ ಇದರಿಂದ ರಾಷ್ಟ್ರಕ್ಕೆ ದೊಡ್ಡ ಆಘಾತವಾಗುತ್ತದೆ.

(ಶ್ರೀ ಬಿ. ವಿ. ಮಾಗಾವಿ)

ಹಾಗಾಗಬಾರದು. ಅದಕ್ಕಾಗಿ ಈ ದಿವಸ ಮಹಾಜನ್ ಅವರು ಕೊಟ್ಟಿರತಕ್ಕ ಒಂದು ವರದಿ ಯೇನಿದೆ ಅದನ್ನೇ ಒಂದು ಆಖೈರು ತೀರ್ಪೆಂದು ಒಪ್ಪಿಕೊಳ್ಳತಕ್ಕ ವಿಶಾಲಭಾವನೆಯನ್ನು ನಮಗೂ ಮತ್ತು ಆ ಮಹಾರಾಷ್ಟ್ರೀಯರಿಗೂ ಮತ್ತು ಇತ್ತ ಕಡೆ ಇರತಕ್ಕ ಜನರಿಗೂ ಅತ್ತ ಕಡೆ ಇರತಕ್ಕ ಜನರಿಗೂ ಭಾರತಾಂಬೆಯು ಅನುಗ್ರಹಿಸಲೆಂದು ಹಾರೈಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri D. M. SIDDIAH.—I want to submit that after this subject is completed you may take up half-an-hour discussion. If the time exceeds 12 1/2 hours, I request the Chair to extend it. I also note down the time taken by each speaker. I request the Chair most humbly to kindly stick to the time.

Sri B. B. SAYANAK (Belgaum).—Mr. Speaker, Sir, I rise to speak on the motion tabled by the Food and Civil Supplies Minister before this august House and I want to give the history of this border problem. Government of India on 29-12-1953 appointed the States Reorganisation Commission to formulate linguistic States in India. Accordingly, 14 unilingual States have been formed and the border people of Belgaum and Karwar did not get any justice by this commission. Therefore, the late Home Minister Sri G. B. Pant had assured the border people that this question of readjustment of the boundaries would be taken up in the Zonal Council. Accordingly, this question was discussed in the Zonal Council. The late Sri G. B. Pant, Home Minister, Government of India, had convened meeting of the two Chief Ministers in the Zonal Council and requested the Chief Ministers of Maharashtra and Mysore to solve the problem amicably. The two Chief Ministers discussed this problem twice or thrice and came to the conclusion that they agreed to differ. Then there was a four man committee and the fate of that committee was also, they agreed to differ. Then Sri Gulzarilal Nanda took up this problem and tried to solve this problem but he also failed. Lastly the Mahajan Commission has come into existence. The case of Maharashtra Government is, they have offered 260 villages of Maharashtra to the Mysore State and have claimed 814 villages from Mysore, on the basis that village should be the unit, geographical contiguity, simple majority and the wishes of the people, should be the basis. Similarly it is the view of the Kerala Government. It has said that the principle should be language contiguity and village should be the unit. The Mahajan Commission did not accept this principle of village as unit. But I may submit that Sri Mahajan, was one of the members of the Partition of Punjab and Mr. Radcliff was the Chairman. Sri Mahajan had emphatically stated before the Commission " in case the Commission decided to proceed on the theory of unit, the only real unit according to me was village,"-page 51 of the 'Partition of Punjab' written by Satya M. Rai. This is the opinion of Sri Mahajan in 1947 and he has not accepted the theory in his report. If this theory had been accepted, there would not be any agitation in Kerala or Mabarashtra or Mysore. What he has done is, he has tried his level best to evolve a formula that village panchayat

should be the basis of unit. But he has not accepted that principle also. For example I quote the village panchayats—group gram panchayats at Belgaum. He has split group gram panchayats also. I submit there is one group gram panchayat in Belgaum by name Kangrali (Budruk), Goundwad and Yamanapur. He has split that area and only Yamanapur village which is Kannada has been given to Mysore. I pity this Commission. Secondly there is one group grama panchayat by name Sutkatti, but Kurihal KH and Kurihal B.K. have been sptit up. These two villages have been given to Maharashtra and the other four villages of that group gram panchayat are given to Mysore. He has gone ahead and has stated in the report on page 26 :

> "My view is that where there is a sizable compact tract where a language group predominates and the population is at least round about 20,000 that area may be considered as a unit for resolving the boundary dispute."

I submit this principle is not accepted by the Commission throughout the border area. For example take nine villages of Hukheri Taluka, There is a population of only 9,229. Is this the way to solve the problem ? He has accepted the principle of 20,000 but he has taken here the basis of 9,229. In Gadinglaj he has offered 15 villages to Mysore and what he has done is, he has grouped these 15 villages in such a way that 5 villages in one tract and 3 villages in another tract and 7 villages in Third tract. By adding all these 15 villages he has given to Mysore. I submit he has not applied this principle of 20,000 population here also. He has not even defined what is the compact area or tract or a Sizable area. He has discussed areas having population of much smaller than 20,000 persons in a number of cases. For example Kudchi and Kanbargi of Belgaum. He has given priority to these two villages. He has advocated transfer of population theory. Maharashtra and Mysore States are in one nation and how is it possible that population should be transferred from one State to another State ? This is a funny case. We had bad experience when Pakistan and India were divided, What is our experience ? Is this the way to eal with the problem ?

Secondly, he has suggested another extraordinary thing, *i.e.*, creating a corridor.

SRI S. D. KOTHAVALE (Sankeswar).—He has not suggested or recommended it.

SRI B. B. SAYANAK.—I will read : On page 33 of the report he says :

> "One of the solutions suggested during arguments for reducing the difficulties of minorities experienced by them in a unilingual State was to give them option of migrating to the unilingual States of their choice. All Marathi-speaking people in these villages may be given the option to settle in Maharashtra and similarly, the Kannada speaking villages in Maharashtra may be given the option to settle in Karnatak.

(Sri B. B. Sayanak)

The transfer of population, if considered a good solution, will involve the problem of their lands and properties. The State Government concerned will have to rehabilitate them and compensate them for their properties. I have a feeling that if given option, a good number will like to stay as they are and not a very large number will migrate. When India and Pakistan were formed a solution was suggested to a similar effect. It was not accepted with the result that at least one crore of people shifted from one side to the other, leaving all that they had in their possession and the Governments of India and Pakistan had to face a big problem of rehabilitation. Here the population is not more than a few lakhs—6 to 8 lakhs—and it may not be difficult to accept the solution and to eradicate this trouble of minorities and of adjusting the State boundaries whenever such a situation arises. On the inter-State level compensation and even transfer of some parts of territory may well be considered. Otherwise, any solution suggested by me is bound to leave considerable minority in one State or the other, but if the Commissioner of Linguistic Minorities functions and the States implement his decisions all the difficulties that the minorities experience can be eliminated."

12-00 NOON

Sri K. H. PATIL.—Let the hon'ble Member refer to para 12 on page 88.

Sri S. D. KOTHAVALE.—The hon'ble Member having read it in detail will be satisfied that it is not part of Mahajan's recommendation but is only the suggestion of somebody who gave evidence.

Sri B. B. SAYANAK.—Then, the Commission has made another extraordinary suggestion of a corridor in the Marathi-speaking areas. It has stated :

"The water works of the town of Belgaum situated in the village Rakaskop is contiguous to Marathi majority villages proposed to be transferred to the State of Maharashtra. This has to be safeguarded. The water works area should be demarcated and left in the State of Mysore. A revenue officer may be asked to demarcate a corridor out of the area of Marathi majority villages and the corridor be not transferred to Maharashtra. Certain rivers that flow from the area proposed to be transferred out of Mysore State should not be interfered with and they should be allowed to flow as heretofore."

In the partition of India and Pakistan when Mr. Jinna suggested a corridor, the Indian leaders unanimously opposed this corridor suggestion. According to article 19 of the Constitution, every citizen has got

freedom of movement throughout the territory of India and therefore this corridor idea is not good.

Regarding this Commission's Report, it is stated that it should be treated as an award. The Commission has stated on page 35 of its report:

> "This Commission's jurisdiction is derived from the Resolution of the Government of India and any recommendation made by it will be considered by that Government, and if accepted will be laid before the Parliament by a regular Bill. It will ultimately be for the Parliament to decide—whether it will redemarcate the borders between the States."

Again on page 155 he has stated:

> "Moreover, in political matters and in matters of adjustments of borders between the States the rules of the law of contract about acceptance and offer and in respect of a completed contract between parties can hardly be made applicable. The Commission, therefore, has made its recommendations on the principles enunciated by it about these offered villages. In its view the acceptance was not in terms of the offer and it is not a mere matter of agreement between the two States. The ultimate decision of making adjustments between the two States rests with the Parliament and it is not bound to decide this matter in accordance with the agreement of the States if it finds that it is not in the well-being of the population concerned."

That the Report of a Commission of this kind could not have the status of an award, is also the view of the Supreme Court of India. The Supreme Court has held as follows in a case reported in A.I,R. 1959 S.C.R. 279:

> "The only power that the Commission has to enquire and make a report and embody therein its recommendations."

In Section 30 of the Arbitration Act also it is stated that an award can be rejected.

While recommending the retention of Belgaum City in Mysore, the Commission had admitted either directly or indirectly that—

(*a*) Belgaum City is contiguous to the Marathi-speaking tract;

(*b*) The Marathi-speaking people are in a relative majority;

(*c*) The social and cultural affinity is with Maharashtra and the city is Maharashtrian in character;

(*d*) The number of primary and secondary schools shows that a substantially larger number of children go to Marathi schools than to Kannad schools;

(*e*) All elections to the Legislature and Municipality have been won since Belgaum City was included in Mysore by candidates favouring a trnsfer to Maharashtra.

(SRI B. B. SAYANAK)

The argument that Belgaum City is surrounded on three sides by Kannada villages is not correct. On the South of Belgaum City five Marathi villages are given as lung and for the expansion of the City and two villages are given as industrial estates and to the North of it the two villages Kangrali Khurd and Kangrali Budruk are Marathi villages and are given to Maharashtra. To the west Thindlaga village which is Marathi and transferred to Maharasta it is not correct to say that Belgaum City is surrounded on three sides by Kannada villages. According to the report, Belgaum City is merged on the basis of administrative convenience. Administrative convenience is for the people, and according to me administrative convenience is the man-made institution, e.g., the capital of Punjab is Chandigarh and the capital of Gujarat is Ahmedabad. Therefore, I submit that the Report should be rejected in toto, because the Report is unjust, illogical, perverse unprincipled and one-sided.

Thank you, Sir.

†ಶ್ರೀ ಎನ್. ಎಸ್. ಪಾಟೀಲ್ (ಅಫ್ಜಲ್‌ಪುರ).—ಮಾನ್ಯ ಸಭಾಧ್ಯಕ್ಷರೇ, ಈ ಗಡಿ ಪ್ರಶ್ನೆ ನಮ್ಮ ರಾಜ್ಯದ ಸಲುವಾಗಿ, ನಮ್ಮ ರಾಷ್ಟ್ರದ ಸಲುವಾಗಿ ಬಹಳ ದಿವಸಗಳಿಂದ ಚರ್ಚಾಸ್ಪದವಾದ ಒಂದು ಮಹಾನ್ ಪ್ರಶ್ನೆಯಾಗಿದೆ. ಇದು ದುರ್ದೈವದ ಸಂಗತಿ. ಇದರ ಬಗ್ಗೆ ಯಾವ ವ್ಯಾಖ್ಯದೊಳಗೆ ನಮ್ಮ ದೇಶದ ನಾಯಕರು ಯಾವ ಕೆಲಸವನ್ನು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಅದರಿಂದ ಇವೊತ್ತು ಕಾಂಗ್ರೆಸ್ ಮುಖಂಡರಾಗಲೀ, ಅಥವಾ ಕಾಂಗ್ರೆಸ್ಸೇತರ ಮುಖಂಡರಾಗಲೀ ಜನರನ್ನು ಶೋಷಣೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಈ ಗಡಿ ಪ್ರಶ್ನೆಯ ಬಗ್ಗೆ ಕಾಂಗ್ರೆಸ್ಸಿನವರೂ ತಪ್ಪು ಮಾಡಿದ್ದಾರೆ, ವಿರೋಧಪಕ್ಷದವರು ಅಥವಾ ಕಾಂಗ್ರೆಸ್ಸೇತರರೂ ತಪ್ಪು ಮಾಡಿದ್ದಾರೆ. ಹೇಗೆಂದರೆ, ಈ ವ್ಯಾಖ್ಯಕ್ಕೆ ಈ ಸಭೆಯಲ್ಲಿದ್ದವರು ಕರ್ನಾಟಕದ ಗಡಿ ಸಲುವಾಗಿ ಯಾವ ಒಂದು ನಿಲುವು ತೆಗೆದುಕೊಳ್ಳಬೇಕಾಗಿತ್ತೋ ಅವನ್ನು ತೆಗೆದುಕೊಳ್ಳಲಿಲ್ಲ. ಈ ಗಡಿ ಪ್ರಶ್ನೆಯ ವಿಷಯದಲ್ಲಿ ಕಾಂಗ್ರೆಸ್ಸಿನವರು ಮತ್ತು ವಿರೋಧ ಪಕ್ಷದವರು ಎನ್ನುವ ಭಾವನೆ ಇಲ್ಲ ಎನಿಸುತ್ತದೆ. ಏತಕ್ಕೆಂದರೆ ಮಹಾರಾಷ್ಟ್ರದಲ್ಲಿ ವಿಧಾನ ಸಭೆಯಲ್ಲಿ ವಿರೋಧಪಕ್ಷದವರು, ಮತ್ತು ಆಳುವ ಪಕ್ಷದವರು ಒಂದಾಗಿ ಈ ಮಹಾಜನ್ ಕಮಿಷನ್ನಿನ ವರದಿಯನ್ನು ರಿಜೆಕ್ಟು ಮಾಡಿದ್ದಾರೆ. ಈ ಗಡಿಯ ಪ್ರಶ್ನೆ ಬಹಳ ಗಂಭೀರವಾದ ವಿಷಯ. ಆದ್ದರಿಂದ ಇದರ ಬಗ್ಗೆ ವಿರೋಧಪಕ್ಷ ಮತ್ತು ಆಳುವ ಪಕ್ಷ ಎಂದು ವಿಚಾರ ಮಾಡಬಾರದು. ಭಾಷಾವಾರು ಪ್ರಾಂತ ರಚನೆ, ಅಥವಾ ಸ್ಟೇಟ್ ರೀ-ಆರ್ಗನೈಜೇಷನ್ ಆಗುವಾಗ ಕೆಲವರು ಬೇಕು ಎಂದು ಹೇಳಿದರು, ಕೆಲವರು ಬೇಡ ಎಂದು ಹೇಳಿದರು. ಆದರೂ ಕೂಡ ಕೊನೆಗೆ ಒಂದು ತೀರ್ಮಾನಕ್ಕೆ ಬಂದು ಎಲ್ಲಾ ಕೂಡಿ ವಿಶಾಲಕರ್ನಾಟಕವನ್ನು ಮಾಡೋಣ ಎಂದು ಹೋರಾಟಮಾಡಿ ಕರ್ನಾಟಕ ರಾಜ್ಯವನ್ನು ರಚನೆ ಮಾಡಿದರು. ಈ ವ್ಯಾಖ್ಯಕ್ಕೆ ಈ ಗಡಿ ಪ್ರಶ್ನೆಯೆಲ್ಲವೂ ಇತ್ಯರ್ಥವಾಗಿ ನಮ್ಮ ರಾಜ್ಯದಲ್ಲಿ ಭಾವೈಕ್ಯತೆ ಬೆಳೆಯಬೇಕಾಗಿತ್ತು. ದೂರದಲ್ಲಿರತಕ್ಕ ಕನ್ನಡಭಾಗಗಳ ಜನರು ಒಬ್ಬರಿಗೊಬ್ಬರು ಸರಿಯಾಗಿ ಕರೆತಿಲ್ಲ. ಈ ವ್ಯಾಖ್ಯಕ್ಕೆ ನಮ್ಮಲ್ಲಿ ಎಷ್ಟರಮಟ್ಟಿನ ಒಂದು ಭಾವೈಕ್ಯತೆ ಬೆಳೆಯಬೇಕಾಗಿತ್ತೋ ಅಷ್ಟರಮಟ್ಟಿನ ಭಾವೈಕ್ಯತೆ ಬೆಳೆದಿಲ್ಲ. ಜನರಲ್ಲಿ ಪ್ರಾಂತೀಯ ಭಾವನೆ ಬೆಳೆದು ಬಂದಿದೆ. ನಮ್ಮ ನಾಡು ಒಡೆದು ಹೋಗುವ ಸಲುವಾಗಿ ಈ ಒಂದು ಭಾವನೆ ಜನರಲ್ಲಿ ಬೆಳೆದು ಬಂದಿದೆ ಎಂದು ಕಾಣುತ್ತದೆ. ಇದು ದುರ್ದೈವದ ಸಂಗತಿ. ಈ ವ್ಯಾಖ್ಯಕ್ಕೆ ಮುಖಂಡರು ಇದ್ದವರು ಎಲ್ಲರನ್ನೂ ಒಟ್ಟುಗೂಡಿಸಿ ಶ್ರಮಪಟ್ಟು ಕೆಲಸ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಹಿಂದೆ ವಿಶಾಲ ಕರ್ನಾಟಕ ಮಾಡೋಣ ಎಂದು ಹೇಳಿದಾಗ ಕೆಲವರು ಬೇಡ ಎಂದು ಹೇಳಿದರು. ಅದಕ್ಕೆ ಹಿನ್ನೆಲೆ ಬೇರೆ ಇತ್ತು. ಅದು ಹಾಗಿರಲಿ, ಅವರೂ ಕೂಡ ಕೆಲವು ಮುಖಂಡರ ಮತ್ತು ಜನಗಳ ಪ್ರಯತ್ನದಿಂದ ನಮ್ಮ ಕರ್ನಾಟಕ ಪ್ರಾಂತ ರಚನೆ ಆಯಿತು. ಈ ರೀತಿ ಕರ್ನಾಟಕ ಪ್ರಾಂತ ರಚನೆ ಆದರೂ ಕೂಡ ಗಡಿ ಸಮಸ್ಯೆಗಳು ಸರಿಯಾಗಿ ಇತ್ಯರ್ಥವಾಗದೆ ಈ ತರಹ ಜಗಳವಾಡಬೇಕಾಯಿತು. ಕರ್ನಾಟಕಕ್ಕೆ ಸೇರಬೇಕಾದ ಭಾಗಗಳು ಇನ್ನೂ ಕೆಲವು ಹೊರಗಡೆ ಉಳಿದಿವೆ. ಈ ಗಡಿ ಪ್ರಶ್ನೆಯ ಸಂಬಂಧದಲ್ಲಿ ನೇಮಕವಾದಂತಹ ಮಹಾಜನ್ ಕಮಿಷನ್ನಿನವರು ಗಡಿ ವಿವಾದವಿರುವ ಪ್ರದೇಶ

ಗಳಿಗೆ ಬಂದ ವೇಳೆಗೆ ಜನಗಳು ಸ್ಟೇಟ್‌ಮೆಂಟ್ ಕೊಡಲು ಬಂದಾಗ ಅನೇಕ ದುರ್ಘಟನೆಗಳು ನಡೆದವು. ಶ್ರೀಮಾನ್ ಶರಣಗೌಡರಿಗೂ ಈ ವಿಷಯ ಗೊತ್ತಿದೆ. ಇದರ ಸಲುವಾಗಿ ನಮ್ಮ ಸರ್ಕಾರದವರು ತಮ್ಮ ಪ್ರತಿಭಟನೆಯನ್ನು ಸೂಚಿಸಿದ್ದಾರೆಯೇ? ಮಹಾಜನ್ ವರದಿಯು ಇನ್ನೂ ದೆಹಲಿಯಲ್ಲಿ ಮುದ್ರಣವಾಗುತ್ತಿರುವಾಗಲೇ, ಅದನ್ನ ನೋಡದೆ ನಮ್ಮ ಮುಖ್ಯ ಮಂತ್ರಿಗಳು, ಮಹಾಜನ್ ವರದಿಯನ್ನು ಒಪ್ಪಬೇಕು ಎಂದು ಹೇಳಿದರು. ಅಷ್ಟೊಂದು ಆತುರ ಏತಕ್ಕೆ ಬೇಕಾಗಿತ್ತು? ಎಲ್ಲರಲ್ಲೂ ದೌರ್ಬಲ್ಯ ಇದೆ. ಈ ಮಹಾಜನ್ ಕಮಿಷನ್ ಶಿಫಾರಸನ್ನು ಒಪ್ಪಲೇಬೇಕು ಎಂದರೆ, ಅದರಿಂದ ನಮಗೆ ಎಷ್ಟೋ ಅನ್ಯಾಯವಾಗಿದೆ. ನ್ಯಾಯವಾಗಿ ನಮ್ಮ ಕರ್ನಾಟಕಕ್ಕೆ ಸೇರಬೇಕಾಗಿದ್ದ ಎಷ್ಟೋ ಭಾಗಗಳು ಬಿಟ್ಟು ಹೋಗಿವೆ. ಸೊಲ್ಲಾಪುರ ಕೊಟ್ಟಿಲ್ಲ, ನಿಪ್ಪಾಣಿ ಕೊಟ್ಟಿಲ್ಲ, ಖಾನಾಪುರ ಕೊಟ್ಟಿಲ್ಲ. ಹೀಗೆ ಇನ್ನು ಅನೇಕ ಕರ್ನಾಟಕಕ್ಕೆ ಸೇರಬೇಕಾದ ಕನ್ನಡದ ಹಳ್ಳಿಗಳು ಮಹಾರಾಷ್ಟ್ರದಿಂದ ನಮಗೆ ಬಂದಿಲ್ಲ. ಮಹಾಜನ್ ಕಮಿಷನ್ನಿನವರು ಆ ಪ್ರದೇಶಗಳು, ಆ ಹಳ್ಳಿಗಳು ನಮಗೆ ಸೇರಬೇಕೆಂದು ತಮ್ಮ ವರದಿಯಲ್ಲಿ ಕೊಟ್ಟಿಲ್ಲ. ಮಹಾಜನ್ ಕಮಿಷನ್ನಿನವರು ಕೆಲವು ಪ್ರದೇಶಗಳನ್ನು ನಮ್ಮ ಕರ್ನಾಟಕಕ್ಕೆ ಕೊಟ್ಟಿದ್ದಾರೆಂದು ಇದನ್ನು ಒಪ್ಪಬೇಕೆಂದು ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ವರದಿಯನ್ನು ಅಸೆಂಬ್ಲಿಯಲ್ಲಿ, ಮಂತ್ರಿಮಂಡಲದಲ್ಲಿ ಇಟ್ಟು ಇದರ ಬಗ್ಗೆ ಎಲ್ಲರ ಅಭಿಪ್ರಾಯವನ್ನೂ ತಿಳಿದುಕೊಂಡು ನಂತರ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿತ್ತು. ಸಣ್ಣ ಭಾವನೆಯಿಂದ ಬೆಳಗಾಂ ಉಳಿಯಿತು, ಕಾರ್ವಾರ ನಮಗೆ ಉಳಿಯಿತು, ಆದ್ದರಿಂದ ಬಾಕಿ ಕನ್ನಡ ಮಾತನಾಡುವ ಜನಗಳು ಇರತಕ್ಕ ಹಳ್ಳಿಗಳು ಹೋದರೂ ಹೋಗಲಿ ಎಂದು ಅಲ್ಪ ಸಂತೋಷಕ್ಕೆ ನಮ್ಮ ನಾಯಕರು ಒಳಗಾಗಿರನವುದು ದುರ್ದೈವದ ಸಂಗತಿ. ಈ ಗಡಿ ವಿವಾದಗಳನ್ನು ಬಗೆಹರಿಸುವುದಕ್ಕೆ ಫಜಲ್ ಅಲಿ ಕಮಿಷನ್ ನೇಮಕ ಮಾಡಿದ್ದರು. ಜೋನಲ್ ಕೌನ್ಸಿಲ್‌ನವರನ್ನು ನೇಮಕ ಮಾಡಿದ್ದರು, ನಮ್ಮ ಹೈದರಾಬಾದ್ ಪ್ರದೇಶದಲ್ಲಿ ಒಂದು ಬೌಂಡರಿ ಕಮಿಷನ್ ನೇಮಕ ಮಾಡಿದ್ದರು ಈಗ ಮತ್ತೆ ಈ ಬೌಂಡರಿ ವಿವಾದಗಳನ್ನು ಬಗೆಹರಿಸುವುದಕ್ಕೆ ಮಹಾಜನ್ ಅವರ ಒಂದು ಕಮಿಷನ್ ನೇಮಕ ಮಾಡಿದ್ದರು. ಹೀಗೆ ಎಷ್ಟು ಕಮಿಷನ್‌ಗಳು ಆದರೂ ನಮ್ಮಲ್ಲಿ ಈ ಗಡಿ ಸಮಸ್ಯೆಗಳು ಇತ್ಯರ್ಥವಾಗದೇ ಹೆಚ್ಚು ಕಡಿಮೆ ಆಗುವುದರ ಸಲುವಾಗಿ ಸರ್ಕಾರದವರು ಒಂದು ನಿಲುವನ್ನೇನಾದರೂ ತೆಗೆದುಕೊಂಡಿದ್ದಾರೆಯೇ? ಈಗ ಮಹಾಜನ್ ಕಮಿಷನ್ನಿನ ಬಗ್ಗೆ ಆದರೂ ಕೇಂದ್ರ ಸರ್ಕಾರದವರು ಒಂದು ಫೈನಲ್ ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆಯೇ? ಭಾರತ ಸರ್ಕಾರದವರೇನೋ ವಿಶಾಲ ಹೃದಯವುಳ್ಳವರು. ಆದರೆ ಗಡಿ ಪ್ರಶ್ನೆ ಏನಿದೆ ಇದು ಬಹಳ ದೊಡ್ಡ ಪ್ರಶ್ನೆ.

ಗಡಿ ಆಯೋಗಕ್ಕೆ ಮೊದಲು ಒಪ್ಪುವುದಿಲ್ಲವೆಂದು ಹೇಳುತ್ತಿದ್ದವರು ನಂತರ ಒಪ್ಪಿಕೊಂಡರು. ನಾನು ಸ್ಪಷ್ಟವಾಗಿ ಹೇಳುತ್ತೇನೆ, ನಮ್ಮ ಸ್ಟೇಟ್‌ನಲ್ಲಿ ಎಷ್ಟೋ ಕೆಲಸಗಳು ದೇವರ ಹೆಸರಿನಲ್ಲಿ ನಡೆಯುತ್ತಿವೆ. ನಮ್ಮ ಸರ್ಕಾರ ಇದುವರೆಗೆ ಈ ತೀರ್ಮಾನದ ಬಗ್ಗೆ ಯಾವ ಒಂದು ಕ್ರಮವನ್ನು ತೆಗೆದುಕೊಂಡಿಲ್ಲ. ದೇವರ ಮೇಲೆ ಭಾರ ಹಾಕಿ ಕುಳಿತುಕೊಳ್ಳುವುದಕ್ಕೂ ಆಗುವುದಿಲ್ಲ. ಮುಂದೆ ಮಾಡುವ ಕೆಲಸವನ್ನು ಈಗಲೇ ನಿರ್ಧಾರ ಮಾಡುವುದು ಒಳ್ಳೆಯದು. ನಮ್ಮ ಸರ್ಕಾರದವರು ಜಾಗ್ರತೆ ಒಂದು ನಿರ್ಧಾರ ತೆಗೆದುಕೊಳ್ಳದಿದ್ದರೆ ನಮ್ಮ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಶ್ರೀ ಗೋಪಾಲಗೌಡರು ಹೇಳಿದರು, ನಿಪ್ಪಾಣಿ, ಚಿಕ್ಕೋಡಿ, ಷೋಲಾಪುರ ಮುಂತಾದ ಪ್ರದೇಶಗಳು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟವು, ಅಲ್ಲಿ ಮರಾಠಿಗರ ಸಂಖ್ಯೆ ಕಡಿಮೆಯಿದೆ, ಆದ್ದರಿಂದ ಆ ಪ್ರದೇಶಗಳನ್ನು ಮತ್ತೆ ಪಡೆಯಬೇಕೆಂದು. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ, ಈ ಪ್ರದೇಶದ ಜನಗಳು ಶಿವಸೇನೆಯ ಭಯಕ್ಕೆ, ದಬ್ಬಾಳಿಕೆಗೆ ಹೆದರುತ್ತಿದ್ದಾರೆ. ರಸ್ತೆಗಳಲ್ಲಿ ಓಡಾಡುವುದು ಇವರಿಗೆ ಕಷ್ಟವಾಗುತ್ತಿದೆ. ಯಾರೋ ನನ್ನ ಮಿತ್ರರು ಹೇಳಿದರು, ಕರ್ನಾಟಕ ರಾಜ್ಯದಲ್ಲಿ ಬಸವಸೇನೆ ಇದೆಯೆಂದು; ನಾನು ಸ್ಪಷ್ಟಪಡಿಸುತ್ತೇನೆ: ನಮ್ಮ ರಾಜ್ಯದಲ್ಲಿ ಯಾವ ಸೇನೆಯೂ ಇಲ್ಲ, ನಮ್ಮ ಜನರು ಸುಸಂಸ್ಕೃತರು ಎಂದು. ಕೀಳುಮನೋವೃತ್ತಿಯಿಂದ ಹೋರಾಡುವ ಜನ ಮಹಾರಾಷ್ಟ್ರದಲ್ಲಿ ಇದ್ದಾರೆ. ಒಂದು ಸಾರಿ ಗಡಿ ಆಯೋಗ ರಚನೆಯಾಗಬೇಕೆಂದು ಹೋರಾಟ ಮಾಡುತ್ತಾರೆ. ಆ ವರದಿ ಬಂದ ಮೇಲೆ ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೋರಾಟಮಾಡುತ್ತಾರೆ. ಇವತ್ತು ಅವರು ನಿಪ್ಪಾಣಿ ಮತ್ತು ಬೆಳಗಾಂ ಬೇಕೆಂದು ಹೇಳುತ್ತಿದ್ದಾರೆ. ಮಹಾರಾಷ್ಟ್ರದ ಜನರು ಬಹಳ ಹೀನವೃತ್ತಿಗೆ, ಕೀಳುವೃತ್ತಿಗೆ ಇಳಿದಿದ್ದಾರೆ. ನಮ್ಮ ಭಾರತ ದೇಶದಲ್ಲಿ ಈ ಮಹಾರಾಷ್ಟ್ರ ರಾಜ್ಯ ರಾಕ್ಷಸ ರಾಜ್ಯವಾಗಿದೆ. ಶಿವಾಜಿ ಕಾಲದಿಂದಲೂ ಇದೇ ರೀತಿ ಮಾಡಿಕೊಂಡು ಬಂದಿದ್ದಾರೆ. ಹಿಟ್ಲರ್‌ನಂತೆ ಹೋರಾಟ ಮಾಡುತ್ತಿದ್ದಾರೆ. ಶಿವಸೇನೆ ಮೂಲಕ ದಬ್ಬಾಳಿಕೆ ಮಾಡುತ್ತಿದ್ದಾರೆ. ಚೈನಾ ದೇಶದವರಂತೆ ನಡೆದುಕೊಳ್ಳುತ್ತಿದ್ದಾರೆ. ಒಂದು ಭಾಗದಲ್ಲಿ ಹೆಚ್ಚು ಜನ ಒಂದೇ ಭಾಷೆ ಮಾತನಾಡುತ್ತಿದ್ದರೆ ಅಂತಹ ಭಾಗವನ್ನು ಸಂಬಂಧಪಟ್ಟ ರಾಜ್ಯಕ್ಕೆ ಸೇರಿಸುವುದು ಸಾಧ್ಯ. ಅದು ಬಿಟ್ಟು ಹೆಚ್ಚು ಜನ ಕನ್ನಡಮಾತನಾಡುವ ಪ್ರದೇಶಗಳೂ ಸಹ ತಮಗೇಬೇಕೆಂದು ಕೇಳುತ್ತಿದ್ದಾರೆ. ಶಿವಸೇನೆ

(ಶ್ರೀ ಎನ. ಎಸ್. ಪಾಟೀಲ್)

ಮೂಲಕ ಪಡೆದುಕೊಳ್ಳುತ್ತೇವೆಂದು ಅವರು ತಿಳಿದಿದ್ದರೆ ಅದು ತಪ್ಪಾಗುತ್ತದೆ. ಏಕೆಂದರೆ ನಮ್ಮ ಜನರೂ ಸಹ ಹೋರಾಟ ಮಾಡಲು ತಯಾರಿದ್ದಾರೆ. ಗೋವಾ ತಮಗೆ ಸೇರಬೇಕೆಂದು ಹೋರಾಟ ಮಾಡಿದರು, ಆದರೆ ಅಲ್ಲಿಯ ಜನರು ಒಪ್ಪಲಿಲ್ಲ. ಕೊಂಕಣಿ ಪ್ರದೇಶಗಳೆಲ್ಲಾ ತಮಗೆ ಸೇರಬೇಕೆಂದು ಹೋರಾಟ ಮಾಡಿದರು, ಆದರೆ ಮಹಾಜನ್ ಅವರು ತಮ್ಮ ವರದಿಯಲ್ಲಿ ಕೊಂಕಣಿ ಭಾಷೆ ಮರಾಠಿ ಭಾಷೆಯ ಉಪಭಾಷೆಯಲ್ಲವೆಂದು ತಿಳಿಸಿದ್ದಾರೆ. ಆದ್ದರಿಂದ ಕೊಂಕಣಿ ಪ್ರದೇಶಗಳು ಇವರಿಗೆ ಸಿಗಲು ಅವಕಾಶವಾಗಲಿಲ್ಲ. ಗಡಿ ಬಗ್ಗೆ ಅದುವರೆಗೆ ಅನೇಕ ಕಮಿಷನ್‌ಗಳು ನೇಮಕವಾದರೂ ಸಹ ಇನ್ನೂ ಬಗೆಹರಿದಿಲ್ಲ. ಎಸ್. ಆರ್. ಕಮಿಷನ್ ಬಂತು. ಎಸ್. ಆರ್. ಸಿ. ಅವರು ತಮ್ಮ ವರದಿಯಲ್ಲಿ ಬೆಳಗಾಂ ಮೈಸೂರಿನಲ್ಲೇ ಉಳಿಯಬೇಕೆಂದು ತೀರ್ಮಾನ ಕೊಟ್ಟಾಗ, ಆಗಲೇ ಮಹಾರಾಷ್ಟ್ರದವರು ಬೇಕಾದರೆ ಒಂದು ಅಮೆಂಡ್‌ಮೆಂಟ್ ತರಬಹುದಾಗಿತ್ತು. ಆಗ ಏತಕ್ಕೆ ತರದೆ ಒಪ್ಪಿಕೊಂಡರು ? ಈಗ ಬೇಕೆಂದು ಕುಚೇಷ್ಟೆ ಮಾಡುವುದು ಸರಿಯಲ್ಲ. ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪ ನವರು ಗಡಿ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ ಕೆಲವು ಮಾತುಗಳನ್ನು ನಾನು ಸಮರ್ಥಿಸುತ್ತೇನೆ. ನಮ್ಮ ವಿರೋಧಪಕ್ಷದ ಇತರ ಮುಖ್ಯ ನಾಯಕರುಗಳೂ ಹಿರಿಯರೂ ಈ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಏಕೆಂದರೆ ಇದು ನಮ್ಮ ಪ್ರಾಂತ್ಯದ ಪ್ರಶ್ನೆಯಾಗಿದೆ. ನಮ್ಮ ಒಂದು ಕೀರ್ತಿಯ ಪ್ರಶ್ನೆಯಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಕೆಲವೊಂದು ತಪ್ಪುಗಳನ್ನು ಮಾಡಿದ್ದಾರೆ, ಅಥವಾ ಮಾಡಿರಬಹುದು. ವಿರೋಧಪಕ್ಷದವರು ತಮ್ಮ ಒಂದು ನಿಲುವನ್ನು ಈ ಸಭೆಯ ಮುಂದೆ ಸ್ಪಷ್ಟವಾಗಿ ತಿಳಿಸಬೇಕು. ಈ ಬಗ್ಗೆ ನೀವುಗಳು ಚೆನ್ನಾಗಿ ಹೋರಾಟ ಮಾಡಿದರೆ ಜನ ನಿಮ್ಮನ್ನು ಮೆಚ್ಚಿಕೊಳ್ಳುತ್ತಾರೆ. ಈ ದಿನ ನೀವು ಆ ಜಾಗದಲ್ಲಿ ಇರಬಹುದು, ನಾಳೆ ಆಡಳಿತ ಪಕ್ಷಕ್ಕೆ ಬರಬಹುದು. ಗಡಿ ಬಗ್ಗೆ ನೀವುಗಳು ಸರಿಯಾದ ನಿಲುವನ್ನು ತಳೆದು ನಾಳೆ ನೀವೇ ಆಡಳಿತವನ್ನು ವಹಿಸಿಕೊಂಡರೆ ನಿಮ್ಮ ಕೀರ್ತಿ ಹೆಚ್ಚುತ್ತದೆ. ಸರ್ಕಾರ ಮಾಡುವ ತಪ್ಪುಗಳನ್ನು ಮಾತ್ರ ವಿರೋಧಪಕ್ಷದವರು ತಿಳಿಸುತ್ತಾ ಹೋಗುವುದು 19ನೇ ಸತಮಾನಕ್ಕೆ ಸೇರಿದ್ದು. 19ನೇ ಶತಮಾನದಲ್ಲಿ ಬಹಳ ಮೂರ್ಖ ಜನರಿದ್ದರು. ಈಗ 20ನೇ ಶತಮಾನ ನಡೆಯುತ್ತಿದೆ. ಈ ಶತಮಾನದಲ್ಲಿ ನಾನು ಏನು ಮಾಡುತ್ತೇನೆ ಎಂಬುದು ಮುಖ್ಯ. ವಿರೋಧಪಕ್ಷದವರಿಗೂ ಸಹ ಕೆಲವೊಂದು ಅಧಿಕಾರಗಳಿವೆ ಮಾನ್ಯ ಸಿದ್ದವೀರಪ್ಪನವರು ಏನು ಮಾತನಾಡುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಈ ಗಡಿ ಪ್ರಶ್ನೆ ಬಗ್ಗೆ ಸರ್ಕಾರದವರು ಕೆಲವೊಂದು ಅಪಾದನೆಗಳನ್ನು ಮಾಡಿರಬಹುದು. ಅದನ್ನು ಬಗೆಹರಿಸುವುದಕ್ಕೆ ವಿರೋಧಪಕ್ಷದವರು ಸಹಕರಿಸಬೇಕು. ಇಂತಹ ಪ್ರಶ್ನೆ ಬಂದಾಗ ಸಂಕುಚಿತ ಮನೋಭಾವವಿರಬಾರದು. ಎಲ್ಲರೂ ಸೇರಿ ಒಂದು ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು. ಈಗಾಗಲೇ ಅನೇಕ ಸಾರಿ ಗಡಿ ಪ್ರಶ್ನೆ ಬಂದಿದೆ. ಆ ಬಗ್ಗೆ ಭಾಷಣ ಮಾಡಿದ್ದೇವೆ. ಸಾಕಷ್ಟು ಚರ್ಚೆ ಮಾಡಿದ್ದೇವೆ. ಸಾಕಷ್ಟು ಜನರು ತಮ್ಮ ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮಹಾರಾಷ್ಟ್ರದವರು ಗಡಿ ಪ್ರಶ್ನೆ ಬಗೆಹರಿಸಲು ಆಯೋಗ ರಚನೆ ಮಾಡಬೇಕೆಂದು ಹೇಳುತ್ತಾರೆ, ಆಯೋಗದ ತೀರ್ಮಾನ ಬಂದಮೇಲೆ ಒಪ್ಪುವುದಕ್ಕಾಗುವುದಿಲ್ಲವೆಂದು ಮಣ್ಣುಮುಕ್ಕುತ್ತಾರೆ. ಒಂದು ಆಯೋಗ ರಚನೆಯಾದರೆ ಎಷ್ಟು ಸಮಯ ಹಾಳಾಗುತ್ತದೆ, ಎಷ್ಟು ಹಣ ಖರ್ಚಾಗುತ್ತದೆ, ಇಷ್ಟೆಲ್ಲಾ ಆದಮೇಲೆ ಆಯೋಗದ ವರದಿ ಏನೇ ಇರಲಿ ಅದನ್ನು ಎರಡು ರಾಜ್ಯಗಳವರು ಮತ್ತು ಕೇಂದ್ರ ಸರ್ಕಾರದವರು ಒಪ್ಪಲೇಬೇಕು. ಈಗ ಮಹಾಜನ್ ಆಯೋಗದ ವರದಿ ಬಂದಿದೆ. ಅದನ್ನು ತಡಮಾಡದೆ ಕೇಂದ್ರ ಸರ್ಕಾರದವರು ಒಪ್ಪಬೇಕು. ಆ ಬಗ್ಗೆ ಒಂದು ಕಡೆಯದಾದ ತೀರ್ಮಾನ ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ಆಯೋಗ ರಚನೆ ಮಾಡುವುದರಲ್ಲಿ ಅರ್ಥವಿಲ್ಲ. ನಮ್ಮ ಸರ್ಕಾರದವರು ಸಹ ಒಂದು ಕಡೆಯ ನಿರ್ಧಾರ ಮಾಡಲೇಬೇಕು. ಬರೀ ಮಾತನಾಡುವುದರಲ್ಲಿ ಅರ್ಥವಿಲ್ಲ. ಮಹಾಜನ್ ವರದಿಯನ್ನು ಎಲ್ಲರೂ ಒಪ್ಪಲೇಬೇಕು. ಶ್ರೀ ಗೋಪಾಲಗೌಡರು ಷೋಲಾಪುರ ನಮಗೆ ಬರಬೇಕೆಂದು ಏನು ಹೇಳಿದರು ಅದನ್ನು ನಾನು ಸಮರ್ಥಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. N. PATIL.—The Commission's report is before the House for discussion. So many Hon'ble members have stated that this report should be treated as an award and it should be accepted in toto by the Government of Inda. We must accept this report in toto not because we gain some territories as alleged by some but because we want to end this dispute once for all. There must be some finality for anything. While observing this question let us look to the border areas that are

mostly affected. What is the opinion of the innocent villagers in the border areas ? The common man in border does not worry whether this village will go to Maharashtra or to Mysore. He is not interested in all these things. They are worried only with their day-to-day problems. The common man wants peace. He wants a dignified life a secured job, food at his affordable price an humble home to shelter, education to his children, and above all equal human rights. He feels he must be allowed to improve his own language and cultural heritage uninterupted as he is not interrupting or interested in interrupting others in their progress. they are least worried about this border dispute whether they speak Kannada or Marathi. Then, who is responsible for all these ? The interested parties are different.

Mr. DEPUTY SPEAKER.—Mr. Patil, can continue his speech on Monday. Now, we shall take up half-an-hour discussion.

Sri S. NIJALINGAPPA.—The discussion may continue on Monday also.

Sri H. SIDDAVEERAPPA.—If the Hon'ble member wishes to close within 10 minutes I will have no objections and I will also close by 1 O' clock.

HALF-AN-HOUR DISCUSSION ON THE POINTS RAISED OUT OF T E ANSWERS TO QUESTION No. 46 *re*: PRIVATE TRANSPORT OWNING BUS PRMITS.

Sri H. SIDDAVEERAPPA.—Sir, I raise a discussion on the points arising out of the answers given on 11th December 1967 to Question No. 46 (168) regarding 'Private Transport owning Bus Permits.'

12–30 P.M.

The question referred to was with regard to the private Transport Owners in the State and also with regard to owners having a daily mileage route of more than 500 miles and the routes in which they hold permits. A reply is given to the fact that there are 1180 Private Transport Owners in the State. In our State we haveaccepted nationalisation as the policy of the State and in parsuance thereto, time and again, Government have issued statements to the fact that certain routes will be nationalised. I understand now, as I read in papers today, that Kanakapura pocket had been allowed to be nationalised and the Supreme Court has given its verdict. I also understand that the next route they want to nationalise is the one in Kolar. But, what does not appeal to me is the way in which discrimination has taken place in the matter of nationalisation of these routes. I would like to refer to the one between Chitradurga and Harihar. From Bangalore upto Belgaum throughout the route is natonalised. But, the small pocket. between Chitradurga